ಆ) ಪ್ರೌಢಶಾಲಾ ಕಟ್ಟಡಗಳ ದುರಸ್ತಿ ಕೆಲಸ ೧೯೮೭–೮೮ನೇ ಆರ್ಥಿಕ ಸಾಲಿನಿಂದ ಜಿಲ್ಲಾ ಪರಿಷತ್ತಿನ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಇ) ೧ ಸರ್ಕಾರಿ ಕಿರಿಯ ಕಾಲೇಜಿನ ದುರಸ್ತಿ ಕೆಲಸದ ಬಗ್ಗೆ ಪ್ರಸ್ತಾವನೆ ಇದ್ದು, ಸರ್ಕಾರದ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

೨ ಪ್ರೌಢಶಾಲೆಗಳ ದುರಸ್ತಿ ಕೆಲಸ ಜಿಲ್ಲಾ ಪರಿಷತ್ತಿನ ಜವಾಬ್ದಾರಿಗೆ ಒಳಪಟ್ಟಿರುತ್ತದೆ.

೩ ಖಾಸಗಿ ಪ್ರೌಢಶಾಲೆಯ ದುರಸ್ತಿ ಕೆಲಸ ಆ ಸಂಸ್ಥೆಯೇ ಕೈಗೊಳ್ಳಬೇಕಾಗುತ್ತದೆ.

ಈ) ಸರ್ಕಾರಿ ಕಿರಿಯ ಕಾಲೇಜಿನ ಕಟ್ಟಡ ದುರಸ್ತಿ ಬಗ್ಗೆ ಪರಿಶೀಲನೆಯಲ್ಲಿದ್ದು. ಸೂಕ್ತ ಕ್ರಮ ಜರುಗಿಸಲಾಗುವುದು.

ಅಧ್ಯಕ್ಷರು.––ವೆಂಕಟರಾಮಯ್ಯನವರೇ, ಶಿಡ್ಲಘಟ್ಟದ ವಿಷಯವಾಗಿ ತಾವು ಏನು ನಿಲುವ' ಸೂಚನೆ ತಂದಿದ್ದೀರಿ ಅದನ್ನು ನಾನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತಿಸಿದ್ದೇನೆ. ಆ ಬಗ್ಗೆ ಸರ್ಕಾರದಿಂದ ನಾಳೆ ಉತ್ತರವನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಹಕ್ಕುಚ್ಯುತಿ ಸೂಚನೆಯ ಪ್ರಸ್ತಾಪ

ಮುಖ್ಯ ಮಂತ್ರಿಯವರು ರಶೀದ್ ಕೊಲೆಯ ಪ್ರಕರಣದ ಬಗ್ಗೆ ಕೋರ್ಟಿನಲ್ಲಿ ಪತ್ರಿಕಾ ಹೇಳಿಕೆ ಕುರಿತು

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.––ನಾನು ಒಂದು ಪ್ರಿವಿಲೇಜ್ ಮೋಷನ್ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.––ಈಗ ಮಾನ್ಯ ಮುಖ್ಯಮಂತ್ರಿಯವರಿಂದ ರಿಪ್ಲೈ ಇದೆ. ಅವರ ರಿಪ್ಲೈ ಆದಮೇಲೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.––ಅಧ್ಯಕ್ಷರೇ, ನಾನು ಈ ವಿಷಯ ಎತ್ತುತ್ತಿರುವುದು ಏಕೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಗುರುವಾರದ ದಿವಸವೇ ಉತ್ತರ ಕೊಡಬೇಕಾಗಿತ್ತು. ಆದರೆ ಅವರು ಈ ಬಗ್ಗೆ ಸೋಮವಾರ ಉತ್ತರ ಕೊಡುತ್ತೇವೆಂದು ಹೇಳಿದರು.

ಅಧ್ಯಕ್ಷರು.––ಈಗ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.––ಇವರು ಉತ್ತರ ಕೊಡುವುದಕ್ಕೆ ಮುಂಚೆ ನಾನು ಇದನ್ನು ಪ್ರಸ್ತಾಪ ಮಾಡಬೇಕಾಗಿದೆ. ಇವರು ಇಲ್ಲಿ ಉತ್ತರ ಕೊಡುವುದಕ್ಕೆ ಮೊದಲು ಮಧ್ಯಂತರದಲ್ಲಿ ಇವರು ಏನು ಮಾಡಿದ್ದಾರೆಂದು ಸದನಕ್ಕೆ ಗೊತ್ತಾಗಬೇಕು. ಈ ಮಧ್ಯೆ ಇವರು ಕೊಚ್ಚಿನ್‌ಗೆ ಹೋಗಿದ್ದಾಗ ಒಂದು ಸ್ಟೇಟ್‌ಮೆಂಟ್‌ನ್ನು ಪಿ.ಟಿ.ಐ.ಗೆ ಕೊಟ್ಟಿದ್ದಾರೆ.

ಅಧ್ಯಕ್ಷರು.––ಈಗ ಅದಕ್ಕೆ ಉತ್ತರ ಕೊಡುತ್ತಾರೆ. ರಿಪ್ಲೈ ಮುಗಿದ ಮೇಲೆ ನಾನು ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.––ರಿಪ್ಲೈಗಿಂತ ಮುಂಚೆ ಇವರು ಈ ಕೆಲಸ ಮಾಡತಕ್ಕ ಪ್ರಮೇಯ ಇರಲಿಲ್ಲ. ನಾನು ಈಗ ರೂಲ್ ೧೯[illegible]ರ ಪ್ರಕಾರ ನೋಟೀಸ್ ಕೊಟ್ಟಿದ್ದೇನೆ. ಕಂಡಿಷನ್ ೧೯೨ರ ಪ್ರಕಾರ. The right to raise a question or privilege shall be governed by the following conditions, namely:—(i) not more than one question shall be raised at the same sitting, (ii) the question shall be restricted to a specific matter of recent occurrence, (iii) the matter requires the intervention of the House. ಈ ಮೂರೂ ಕಂಡೀಷನ್ಸ್ ಫುಲ್‌ಫಿಲ್ ಮಾಡಿ ನಾನು ನೋಟೀಸ್ ಕೊಟ್ಟಿದ್ದೇನೆ. Before commencement of the House. ಅದನ್ನು ಫುಲ್‌ಫಿಲ್ ಮಾಡಿದ್ದೇನೆ. ಈ ಎಲ್ಲಾ ಕಂಡೀಷನ್ಸ್ ಫುಲ್‌ಫಿಲ್ ಮಾಡಿ ನಿಮ್ಮ

ಮುಂದೆ ಕೊಟ್ಟಿದ್ದೇನೆ. ಇಲ್ಲಿ ಮುಖ್ಯವಾದ ವಿಷಯ ಏನೆಂದರೆ, ಮಾನ್ಯ ಮುಖ್ಯ ಮಂತ್ರಿಯವರು ೧೪ನೇ ತಾರೀಖು ಅಲ್ಲಿ ಯು.ಎನ್.ಐ. ಮತ್ತು ಪಿ.ಟಿ.ಐ.ಗೆ ಇದನ್ನು ಹೇಳಿದ್ದಾರೆ. ಅದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿದೆ. ಅದು ಈ ರೀತಿ ಇದೆ:—

"Karnataka Chief Minister Ramakrishna Hegde today charged that the Congress (I) Cen ral leaders were using the CBI inquiry into the murder of Kerala lawyer Rasheed to embarrass the Janata Government.

Addressing a press conference here, Mr. Hegde said he had thought it fit to leave the case to the CBI for a smooth investigation since the case covered three States they are Karala, Karnataka and Tamil Nadu.

He said that for over six months the CBI had kept quiet and suddenly an over enthusiastic advocate of the CBI dragged the name of his former Cabinet colleague, Mr. R.L. Jalappa, with ulterior motives.

He said that no one had made any charge against Mr. Jalappa until recently and there was no mention of Mr. Jalappa in the first information report.

Asked why Mr. Jalappa had resigned from the Cabinet, Mr Hegde said in the wake of the orchestrated Congress (I) demand for his resignation, Mr Jalappa had offered to resign. It was a sacrifice by his former colleague, he added.

Mr. Hegde said that because of the way the CBI proceeded with the case, "the CBI's credibility is finished now. The man who should have been interrogated had not even been called so far.

'I regret having referred the case to the CBI' he said."

ಅವರು ಈ ಬಗ್ಗೆ ಏನು ಹೇಳಬೇಕಾಗಿತ್ತೊ ಅದನ್ನು ಇವತ್ತಿನ ದಿವಸ ಇಲ್ಲಿ ಹೇಳಬೇಕಾಗಿತ್ತು. ಅದನ್ನು ಈ ಸದನಕ್ಕೆ ಹೇಳುವುದನ್ನು ಬಿಟ್ಟು, ಕೊಚ್ಚಿನ್‌ಗೆ ಹೋದಾಗ ಅಲ್ಲಿ ಪಿಟಿಐ ಮತ್ತು ಯುಎನ್‌ಐ ನವರನ್ನು ಸ್ಪೆಷಲ್ ಆಗಿ ಕರೆಯಿಸಿ ಅವರಿಗೆ ಇಂಟರ್‌ವ್ಯೂ ಕೊಟ್ಟು ಹೇಳತಕ್ಕ ಪ್ರಮೇಯವಿರಲಿಲ್ಲ. ಆದ್ದರಿಂದ ಅವರು ಈ ಸದನದ ಘನತೆ ಮತ್ತು ಗೌರವವನ್ನು ಕುಂದಿಸಿದ್ದಾರೆ. ಅವರು ಈಗಾಗಲೇ ಸಿಬಿಐ ನವರನ್ನು ಬ್ಲೇಮ್ ಮಾಡಿದ್ದಾರೆ. ಅವರ ವರ್ತನೆಯ ಬಗ್ಗೆ ಬ್ಲೇಮ್ ಮಾಡಿದ್ದಾರೆ. ಇದು ಹೇಗಾಯಿತು? ಇದು ದುರದೃಷ್ಟಕರ ಸಂಗತಿ. ಜಾಲಪ್ಪನವರನ್ನು ಇನ್‌ವಾಲ್ವ್ ಮಾಡಿದ್ದಾರೆಂದು ಇವರೇ ಈ ರೀತಿ ಜಡ್ಜ್‌ಮೆಂಟ್ ಕೊಟ್ಟರೆ, ಅದರ ಪರಿಣಾಮ ಈಗ ನಡೆಯುತ್ತಕ್ಕ ಇನ್‌ವೆಸ್ಟಿಗೇಷನ್ ಮೇಲೆ ಬೀಳುತ್ತರೆಂದು ನಾವು ಪದೇ ಪದೇ ಸದನದಲ್ಲಿ ಹೇಳಿದರೂ ಕೂಡ ಇವರು ಉದ್ದೇಶ ಪೂರ್ವಕವಾಗಿ ಈ ಮಾತನ್ನು ಹೇಳುತ್ತಿದ್ದಾರೆ. ಇದರ ಬಗ್ಗೆ ನಾವೇನು ತಿಳಿದುಕೊಳ್ಳಬೇಕೆಂದರೆ, ಜಾಲಪ್ಪನವರು ಇನ್ನೊಸೆಂಟ್ ಇದ್ದಾರೆ, ಅವರನ್ನು ಸಿಕ್ಕಿಸಬೇಕೆನ್ನುವ ಇನ್‌ಟೆನ್‌ಷನ್ ಇವರಿಗೆ ಇದೆಯೋ ಏನೋ ಗೊತ್ತಿಲ್ಲ. ಇವರು ಏನೇ ಹೇಳಬೇಕಾದರೂ ಸದನದಲ್ಲಿ ಹೇಳಬೇಕಾಗಿತ್ತು. ಇನ್‌ವೆಸ್ಟಿಗೇಷನ್ ನಡೆಯುವಾಗ ಒಂದೇ ಕಡೆ ಇವರೇ ಹೇಳುತ್ತಾರೆ, ಇನ್‌ವೆಸ್ಟಿಗೇಷನ್ ಮೇಲೆ ಪರಿಣಾಮ ಬೀರುತ್ತದೆಂದು ಸಿಬಿಐ ನವರು ಏಳು ತಿಂಗಳುಗಳಿಂದ ಸುಮ್ಮನೆ ಇದ್ದರು ಹಾಗೆ ಹೀಗೆ ಎಂದು ಹೇಳುತ್ತಾರೆ. ಆ ಮಾತನ್ನು ಹೇಳಿದರೆ ಇನ್‌ವೆಸ್ಟಿಗೇಷನ್ ಮೇಲೆ ಇವತ್ತಿನ ದಿವಸ ಗಂಭೀರ ಪರಿಣಾಮ ಆಗುತ್ತದೆ. ಎರಡನೆಯದಾಗಿ ಇವರು ಈಗಾಗಲೇ ಇಂತ ವರು ಇನ್ನೊಸೆಂಟ್

ಇದ್ದಾರೆಂದು ಹೇಳಿಕೆಯನ್ನು ಇವರೇ ಕೊಡುತ್ತಿದ್ದಾರೆ. ಇನ್‌ವೆಸ್ಟಿಗೇಷನ್ ನಡೆಯುವಾಗ ಈ ಮಾತನ್ನು ಹೇಳಬಾರದು. ಕಾನೂನು ಪ್ರಕಾರ ಏನಾಗುತ್ತದೆಯೋ ಅದು ಆಗುತ್ತದೆ. ಈ ತರಹ ಸ್ಟೇಟ್‌ಮೆಂಟ್‌ಗಳನ್ನು ಕೊಡುವುದು ಸರಿಯಲ್ಲ. ಸೋಮವಾರ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿ, ಅದಕ್ಕಿಂತ ಮುಂಚೆ ಕೇರಳದಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಗುರುವಾರವೇ ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದು ಕೇರಳದ ಪತ್ರಿಕೆಗಳಲ್ಲಿ ಬರುತ್ತಿತ್ತು. ಕೇರಳಕ್ಕೆ ಹೋಗಿ ಪಿಟಿಐ ಮತ್ತು ಯುಎನ್‌ಐ ವರದಿಗಾರರನ್ನು ಕರೆಯಿಸಿ ಹೇಳಿಕೆ ಕೊಟ್ಟು ಬಂದರು, ಅದು ನಿನ್ನೆ ದಿವಸದ ಪತ್ರಿಕೆಗಳಲ್ಲಿ ಬಂದಿದೆ. ಸದನದ ಘನತೆ ಗೌರವವನ್ನು ಅವರ ಹೇಳಿಕೆಯಿಂದ ಕುಂದಿಸಿದ್ದಾರೆ. ಅದಕ್ಕೆ ನಾನು ಹಕ್ಕುಚ್ಯುತಿ ನಿರ್ಣಯವನ್ನು ಮೂವ್ ಮಾಡಿದ್ದೇನೆ. ಅದಕ್ಕೆ ತಾವು ಅಲೋ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ —ಮಾನ್ಯ ಅಧ್ಯಕ್ಷರೆ ಹಕ್ಕುಚ್ಯುತಿ ಪ್ರಶ್ನೆ ಇಲ್ಲಿ ಹೇಗೆ ಉದ್ಭವವಾಗುತ್ತದೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಕೇರಳಕ್ಕೆ ಹೋದದ್ದು ಹೌದು, ಅಲ್ಲಿ ಪತ್ರಿಕಾ ಕರ್ತರನ್ನು ಭೇಟಿಯಾದದ್ದು ಹೌದು. ಈ ವಿಚಾರದಲ್ಲಿ ನಾನು ಇಲ್ಲಿ ಏನು ಹೇಳಿದ್ದೇನೆ ಅದಕ್ಕಿಂತ ಹೆಚ್ಚು ಶಬ್ದವನ್ನು ಹೇಳಿಲ್ಲ. ಬೇರೆ ಕಡೆ ಹೋದಾಗ ಸ್ವಾಭಾವಿಕವಾಗಿ ಪತ್ರಿಕಾ ಕರ್ತರು ಭೇಟಿಯಾಗುತ್ತಾರೆ. ಇಲ್ಲಿ ಇದರ ಬಗ್ಗೆ ಎರಡು ಮೂರು ದಿವಸಗಳು ಚರ್ಚೆಯಾಯಿತು. ಚರ್ಚೆಯಾದ ಮೇಲೆ ಸಾಮಾನ್ಯವಾಗಿ, ಸ್ವಾಭಾವಿಕವಾಗಿ ಅಲ್ಲಿಯ ಸಾರ್ವಜನಿಕರು ಅದರಲ್ಲೂ ಮುಖ್ಯವಾಗಿ ಪತ್ರಿಕಾ ಕರ್ತರಲ್ಲಿ ಇಂಟರೆಸ್ಟ್ ಇರುತ್ತದೆ. ನಾನು ಇಲ್ಲಿ ಏನು ಹೇಳಿದ್ದೇನೆ ಅದನ್ನೇ ಅಲ್ಲೂ ಹೇಳಿದ್ದೇನೆ. ಈ ವಿಷಯವನ್ನು ಸಿಬಿಐ ನವರಿಗೆ ಒಪ್ಪಿಸಿದ್ದು ತಪ್ಪಾಯಿತೋ ಎಂದು ಹೇಳಿದ್ದೇನೆ. ಸಿಬಿಐ ನವರು ಈಗ ಏನು ಪೋಲಿಸರನ್ನು ದಸ್ತಗಿರಿ ಮಾಡಿ ಅವರ ಹತ್ತಿರ ಹೇಳಿಕೆ ಪಡೆದಿದ್ದಾರೆ. ಅದು ಸರಿಯಾಗಿ ನಡೆದಿದೆಯೋ ಇಲ್ಲವೋ ಎನ್ನುವ ವಿಚಾರವನ್ನು ಇಲ್ಲಿ ಹೇಳಿದ್ದನ್ನು ಅಲ್ಲೂ ಹೇಳಿದ್ದೇನೆ. ಆದ್ದರಿಂದ ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ನೀವು ಏನು ಹೇಳಬೇಕೊ ಹೇಳಿ, ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಏನು ಹೇಳಬೇಕೊ ಅದಕ್ಕೆ ಈಗಾಗಲೇ ಪ್ರಭಾವ ಬರುತ್ತಾ ಇದೆ. ಅವರ ದುರದೃಷ್ಟಕರ ಹೇಳಿಕೆಗಳಿಂದ ಈ ಕೇಸಿನ ಮೇಲೆ ಪರಿಣಾಮ ಬೀಳುತ್ತದೆ. ಆದ್ದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಹಕ್ಕುಚ್ಯುತಿ ಹೇಗಾಗಿದೆ ಎನ್ನುವುದರ ಬಗ್ಗೆ ವಿಶ್ಲೇಷಣೆ ಇಲ್ಲ. ನೀವು ಸ್ಟೇಟ್‌ಮೆಂಟ್ ಮಾಡಿದ್ದೀರಿ, ಮುಖ್ಯ ಮಂತ್ರಿಗಳು ಇಲ್ಲಿ ಹೇಳಬೇಕಾದ್ದನ್ನು ಅಲ್ಲಿ ಹೇಳಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಆದರೆ ಹೊಸದೇನನ್ನು ಇಲ್ಲಿ ಹೇಳಲಿಲ್ಲ, ಅಲ್ಲೂ ಹೇಳಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದರಿಂದ ಯಾರಿಗೆ ಹಕ್ಕುಚ್ಯುತಿಯಾಗಿದೆ? ಸದನಕ್ಕೆ ಹಕ್ಕುಚ್ಯುತಿಯಾಗಿದೆಯೋ? ಹಕ್ಕುಬಾಧ್ಯತಾ ಸಮಿತಿಗೆ ಚ್ಯುತಿಯಾಗಿದೆಯೆ? ಸದಸ್ಯರ ಹಕ್ಕಿಗೆ ಚ್ಯುತಿಯಾಗಿದೆಯೋ? ಇದರ ಬಗ್ಗೆ ಮಾನ್ಯ ಸದಸ್ಯರು ಬೆಳಕು ಚೆಲ್ಲಲಿಲ್ಲ. ವೃತ್ತ ಪತ್ರಿಕೆಗಳಲ್ಲಿ ಬಂದಿರತಕ್ಕ ಮುಖ್ಯ ಮಂತ್ರಿಗಳ ವರದಿಯನ್ನು ಇಲ್ಲಿ ಓದಿ ಏನೋ ಆಗಿದೆ, ನೀವು ಏನೋ ಹೇಳಿದ್ದೀರಿ ಎಂದು ಹೇಳಿದರೆ.

ಇದರಿಂದ ಎಲ್ಲಿ ಹಕ್ಕು ಚ್ಯುತಿ ಆಗುತ್ತದೆ ? ಯಾರಿಗೆ ಆಗಿದೆ ಮತ್ತು ಹೇಗೆ ಆಗಿದೆ ಎನ್ನುವುದರ ಬಗ್ಗೆ ವಿವರಣೆ ಇಲ್ಲ. ಆದ್ದರಿಂದ ಇದು ಹಕ್ಕುಚ್ಯುತಿ ಸಮಿತಿಗೆ ಹಾಕುವುದಕ್ಕೆ ಯೋಗ್ಯವಾದಂಥ ವಿಷಯ ಅಲ್ಲ. ದಯಮಾಡಿ ಅವರು ಏನು ತಮ್ಮ ಮನವಿಯನ್ನು ಇಟ್ಟಿದ್ದಾರೆ ಅದು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕಂಥ ವಿಷಯ ಅಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು.—ನೀವು ಇದಕ್ಕೆ ಸಹಿ ಹಾಕಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಸಹಿ ಬೇಕಾಗಿಲ್ಲ, ಶ್ರೀ ಲಕ್ಷ್ಮೀಸಾಗರ್ ಅವರು ಸಹಿ ಹಾಕಿದ್ದಾರೆಯೇ ? ಆದ್ದರಿಂದ ಪ್ರಿವಿಲೇಜ್ ಮೋಷನ್ ಅನ್ನು ಶ್ರೀ ಖರ್ಗೆಯವರು ಏನು ಕೊಟ್ಟಿದ್ದಾರೆ, ಇದರಲ್ಲಿ ಪ್ರಶ್ನೆ ಉದ್ಭವವಾಗುವುದು ಇಷ್ಟೆ : ತಮ್ಮ ತಲೆಯಲ್ಲಿರಬಹುದು ಏನೆಂದರೆ ಇದು ಒಂದು ಪಾಲಿಸಿ ಮ್ಯಾಟರ್ ಅಲ್ಲ. ಆದ್ದರಿಂದ ಪಾಲಿಸಿ ಮ್ಯಾಟರ್ ಅಲ್ಲದೇ ಇರತಕ್ಕಂಥಾದ್ದರ

ಬಗ್ಗೆ ಏನನ್ನು ಬೇಕಾದರೂ ಹೇಳಬಹುದು ಎಂಬ ವಿಚಾರ ತಮ್ಮ ತಲೆಯಲ್ಲಿ ಇರಬಹುದು. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಹೊಸದಾಗಿ ನಾನು ಏನೂ ಹೇಳಿಲ್ಲ ಎನ್ನುವ ಧಾಟಿಯಲ್ಲಿ ಹೇಳಿದ್ದಾರೆ. ನಾನು ಇಲ್ಲಿ ಏನು ಹೇಳುತ್ತಿದ್ದೆ. ಅದನ್ನೇ ಅಲ್ಲಿ ಹೋಗಿ ಹೇಳಿದ್ದೇನೆ. ಮತ್ತು ಅವರು ಕೇಳಿದರು, ನಾನು ಹೇಳಿದ್ದೇನೆ ಎಂದು ಹೇಳಿದ್ದಾರೆ. ಆದರೆ ಈ ಪ್ರಸಂಗ ನಡೆದದ್ದು ಯಾವಾಗ ? ಸನ್ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ನಡೆದಂಥ ಚರ್ಚೆಗೆ ಉತ್ತರ ಕೊಡುತ್ತಿದ್ದರೆ ಅಥವಾ ಭಾಗಶಃ ಉತ್ತರ ಕೊಡುತ್ತಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾವು ಒಪ್ಪಬಹುದಿತ್ತು. ಇಲ್ಲಿ ಪ್ರಶ್ನೆ ಇಷ್ಟೆ. ಏಕೆಂದರೆ ಈ ವಿಚಾರದಲ್ಲಿ ವ್ಯಾಪಕವಾದಂಥ ಚರ್ಚೆ ಆಗಿದೆ. ಚರ್ಚೆ ಆದಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತು ಹೇಳಿದರು, ಏನೆಂದರೆ ನಾನು ಸೋಮವಾರ ದಿವಸ ಉತ್ತರ ಕೊಡುತ್ತೇನೆ ಎಂದು. ಆದ್ದರಿಂದ ಅಲ್ಲಿ ಕಾರ್ಯಕ್ರಮ, ಸಾರ್ವಜನಿಕ ಸಭೆ ಇರುವಾಗ ಇಲ್ಲಿ ಹೇಳಿಕೆ ಕೊಟ್ಟರೆ ತಪ್ಪಾಗುತ್ತದೆ, ಇದರಿಂದ ಸಾರ್ವಜನಿಕ ಸಭೆಗೆ ಆತಂಕ, ತೊಂದರೆ ಬರಬಹುದು ಎಂದು ಹೇಳಿ ತಂತ್ರದಿಂದ ಅವತ್ತು ಉತ್ತರ ಹೇಳುವುದನ್ನು ಮುಂದಕ್ಕೆ ಹಾಕಿರಬಹುದು. Allright we have helped him. ಇಲ್ಲಿ ಪ್ರಶ್ನೆ ಏನು ಎಂದರೆ, ನಾವು ಎತ್ತಿದಂಥ ಪ್ರಶ್ನೆಗಳು ಯಾವುದು ಎಂದು ತಾವು ದಯವಿಟ್ಟು ಪರಾಂಬರಿಸಬೇಕು. ನಾವು ಎತ್ತಿದಂಥ ಪ್ರಶ್ನೆಗಳಿಗೆ ಉತ್ತರವನ್ನು ಕೇರಳದ ನೆಲದಿಂದ, ಕೊಚ್ಚಿಯಿಂದ, ತ್ರಿವೆಂಡ್ರಮ್‌ನಿಂದ ಕೊಟ್ಟರೆ ಅದು ತಪ್ಪಾಗುತ್ತದೆ. ಹೊಸತು ಹಳತು ಎನ್ನುವ ಪ್ರಶ್ನೆ ಅಲ್ಲ ಇಲ್ಲಿ. ಮೂಲಭೂತವಾಗಿ ಏನು ಸದಸ್ಯರು ಆ ಚರ್ಚೆಯಲ್ಲಿ ಅಂದರೆ ಶ್ರೀಮಾನ್ ರಷೀದ್ ಅವರ ಮರಣಕ್ಕೆ ಸಂಬಂಧಪಟ್ಟ ವಿಚಾರದಲ್ಲಿ. ಅದಕ್ಕೆ ಹೊಂದಾಣಿಕೆಯಾಗಿ ಏನು ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಪತ್ರಿಕೆಯಲ್ಲಿ ಹಿಂದೆ ಹೇಳಿಕೆಯನ್ನು ಕೊಟ್ಟಿದ್ದರು. ಆ ಬಗ್ಗೆ ಮೂಲಭೂತವಾದ ಪ್ರಶ್ನೆಯನ್ನು ನಾವು ಎತ್ತಿದ್ದೇವೆ. ಈ ಪ್ರಶ್ನೆಗಳಿಗೆ ಅವರು ಪತ್ರಿಕಾ ಪ್ರಕಟಣೆ ಕೊಟ್ಟಿರುವುದನ್ನು ಶ್ರೀ ಖರ್ಗೆಯವರು ತಮ್ಮ ಗಮನಕ್ಕೆ ತಂದಿದ್ದಾರೆ. ಅದು ಉತ್ತರ ಆಗಿದ್ದರೆ *prima facie* it amounts to privilege. ಉತ್ತರ ಕೊಡತಕ್ಕಂಥ ಅವಶ್ಯಕತೆಯೇ ಇಲ್ಲ ಎಂದರೆ He can as well request the Hon'ble House to adopt this as reply. *Prima Facie* case is here because it is a direct reply to the major basic issues which were raised by us. ಹಾಗಿದ್ದರೆ ಈ ಸದನ ಏಕೆ ಬೇಕು ? ಆದ್ದರಿಂದ ಈ ಸದನವನ್ನು ಒಂದು ವೇದಿಕೆಯಾಗಿ ಇಟ್ಟುಕೊಂಡು ಅದೇ ಉತ್ತರವನ್ನು ಪುನರುಚ್ಚರಿಸುವುದಾದರೆ ಅದು ಅನಾವಶ್ಯಕ. ಇದರಿಂದ ಸದನವನ್ನು ದುರುಪಯೋಗ ಮಾಡಿದಂಥ ಅದಕ್ಕೆ ಅಪಮಾನ ಮಾಡಿದಂಥ ಅಪವಾದದ ಹೊರೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೊರಲೇಬೇಕಾಗುತ್ತದೆ. ಇಲ್ಲದಿದ್ದರೆ ನಾವು ಕುಳಿತುಕೊಂಡು ಬಿಡುತ್ತೇವೆ. ಉತ್ತರ ಬೇಡವೇ ಬೇಡ. ಬರೀ ಕ್ಲಾರಿಫಿಕೇಶನ್ ಅಷ್ಟೇ ಕೇಳಿಬಿಡುತ್ತೇವೆ. ಈಗಾಗಲೇ ಉತ್ತರ ಹೇಳಿದಮೇಲೆ ಸದಸ್ಯರುಗಳಿಗೆ ಉಳಿದಿದ್ದು ಏನು ? ಕ್ಲಾರಿಫಿಕೇಶನ್ ? ತಮ್ಮ ಉತ್ತರದ ರಿಪಿಟೇಶನ್ ಅನ್ನು ಪಾಪ ಅವರು ಏಕೆ ಮಾಡಬೇಕು ? ಕಾಲಶೋಷಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ಏಕೆ ಮಾಡಬೇಕು ? ಹೊಸ ಸಂಪ್ರದಾಯ ಪ್ರಾರಂಭ ಆಗಿ ಬಿಡಲಿ. ನಾವು ಇಲ್ಲಿ ಪ್ರಶ್ನೆಯನ್ನು ಎತ್ತಿದಮೇಲೆ ಗಂಟೆಗಟ್ಟಲೇ ಚರ್ಚೆ ಆಗುತ್ತದೆ. ನಂತರ ಅದಕ್ಕೆ ಉತ್ತರವನ್ನು ಹೊರಗಡೆ ಕೊಡುವುದು. ಅಲ್ಲಿ ಕೊಟ್ಟ ಉತ್ತರವನ್ನು ಇಲ್ಲಿ ಅಡಾಪ್ಟ್ ಮಾಡಿ ಕೌಲ್ ಅಂಡ್ ಶಕ್ಧರ್ ಕಾಮೆಂಟರಿ ಮೇಲೆ ಒಂದು ಹೊಸ ಪುಸ್ತಕವನ್ನು ಮಾನ್ಯ ಮುಖ್ಯಮಂತ್ರಿಗಳು ಬರೆಯುತ್ತಿದ್ದಾರೆ. ಹೊಸ ಪುಸ್ತಕವನ್ನು ಬರೆಯಲಿ. ಒಂದು ವೇಳೆ ಸಭೆಯ ಒಳಗಡೆ ಎತ್ತಿದಂಥ ಕಾರ್ಯಕಲಾಪಗಳಿಗೆ ಹೊರಗಡೆ ಉತ್ತರವನ್ನು ಕೊಟ್ಟರೆ ಅದನ್ನು ಸದನದಲ್ಲಿ ಕೊಟ್ಟಂಥ ಉತ್ತರವೆಂದು ಪರಿಗಣಿಸಬೇಕು. It is a new interpretation of Ramakrishna Hegde on parliamentary practices. ಇದನ್ನು ತಾವು ಪ್ರೈಮಾ ಫೇಸಿಯಾಗಿ ಪ್ರಿವಿಲೇಜ್ ಮೋಷನ್ ಅನ್ನು ಕನ್ಸಿಡರ್ ಮಾಡದೇ ಇದ್ದರೆ ನಾವು ಏನು ಮಾಡುತ್ತೇವೆ ಎಂದರೆ ಸಂಬಂಧಪಟ್ಟ ಪ್ರಶ್ನೆಗೆ ಹೊರಗಡೆ ಉತ್ತರ ಕೊಡುತ್ತೇವೆ, ಇಲ್ಲಿ ಏಕೆ ಕೊಡಬೇಕು ?

ಏಕೆಂದರೆ, ಇದರಲ್ಲಿ ರೂಲ್ಸ್ ಇಲ್ಲ. ಏನಾದರೂ ಹೇಳಬಹುದು. ಕಾನೂನು ಚೌಕಟ್ಟು ಇಲ್ಲ. ರೂಲ್ಸ್ ಆಫ್ ಪ್ರೊಸೀಜರ್ ಇಲ್ಲ. ಅಧ್ಯಕ್ಷರೇ, ದಯಮಾಡಿ, ಇನ್ನೊಂದು ಹೊಸ ವಿಧಾನವನ್ನು ತಾವು ಅನುಸರಿಬೇಕು. ಏನೆಂದರೆ, ನಾವು ಹೊರಗಡೆ ಪತ್ರಿಕೆಯಲ್ಲಿ ಪ್ರಶ್ನೆ ಕೇಳುತ್ತೇವೆ, ನೀವು ಉತ್ತರ ಕೊಡಿಸಬೇಕು. ಇನ್ನು ಮುಂದೆ ಹೀಗೆ ಮಾಡೋಣ. ಹೊರಗಡೆ ಪ್ರಶ್ನೆ ಕೇಳುತ್ತೇವೆ. ಹೊರಗಡೆ ಕಾಲಿಂಗ್ ಅಟೆನ್ಷನ್ ಕೇಳುತ್ತೇವೆ, ಅವು ಪತ್ರಿಕೆಯಲ್ಲಿ ಬರುತ್ತವೆ, ನೀವು ಉತ್ತರ ಕೊಡಿಸಬೇಕು.

ಇನ್ನು ಮುಂದೆ ಹೊಸ ಪ್ರೊಸೀಜರ್ ಜಾರಿಗೆ ತೆಗೆದುಕೊಂಡು ಬನ್ನಿ. ಇಲ್ಲದಿದ್ದರೆ, ವಿಧಾನ ಸೌಧದ ಕಾನೂನು ಕಟ್ಟಳೆ ಪ್ರಕಾರ, ಸದನದ ಸಮೀಕ್ಷೆಯೆಲ್ಲಾ ನಡೆಯಬೇಕೆಂದು ತಾವು ಹೇಳುವುದಿದ್ದರೆ ನಾವೆಲ್ಲಾ ಅದಕ್ಕೆ ತಲೆಬಾಗಿ ನಡೆಯುತ್ತೇವೆ, ಇಲ್ಲದೇಹೋದರೆ ಈ ರೀತಿಯ ಹೊಸ ಪ್ರೊಸೀಜರ್ ತಂದರೆ, ನಾವು ಇದನ್ನು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಉವಾಚ ಎಂದು ಹೇಳುತ್ತೇವೆ. ಆದ್ದರಿಂದ ಎಲ್ಲರೂ ಪಾರ್ಲಿಮೆಂಟರಿ ಪ್ರಾಕ್ಟೀಸ್ ಪ್ರಕಾರ ನಡೆಯಬೇಕೆಂದು ಕೇಳಿಕೊಳ್ಳುತ್ತೇವೆ. ಅಧ್ಯಕ್ಷರೇ, we seek your permission that ten people from our side will raise and seek your permission to refer it to the Privileges Committee.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್...

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೇ, ತಾವು ಹೊಸ ಪ್ರೊಸೀಜರ್ ಹಾಕುತ್ತೀರಿ. ಅದು ನಿಯಮಗಳ ಪ್ರಕಾರ ಬರುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಎರಡು ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದು ೧೯೫ ರೂಲ್ ಪ್ರಕಾರ ತಮಗೆ ಸಂಪೂರ್ಣವಾದ ಅಧಿಕಾರ ಇದೆ. ಯಾವ ವಿಷಯ ಹಕ್ಕುಚ್ಯುತಿ ವಿಷಯ ಆಗುತ್ತದೆ, ಯಾವ ವಿಷಯ ಹಕ್ಕುಚ್ಯುತಿ ವಿಷಯವಾಗುವುದಿಲ್ಲ ಎಂಬ ತೀರ್ಮಾನದ ಬಗ್ಗೆ ತಮಗೆ ಸಂಪೂರ್ಣವಾದ ಅಧಿಕಾರ ಇದೆ, ೧೦ ಜನ ಸದಸ್ಯರು ಇದರ ಪರವಾಗಿದ್ದಾರೆ, ನಿಯಮದ ಪ್ರಕಾರ ನೀವು ಅನುಮತಿ ಕೊಡುತ್ತೀರಿ ಎಂಬ ವಾದವನ್ನು ಮಾನ್ಯ ಸದಸ್ಯರು ಇಟ್ಟಿದ್ದಾರೆ. ರೂಲ್ ೧೯೫ರ ಪ್ರಕಾರ ಇದಕ್ಕೆ ಬಲ ಸಿಕ್ಕುವುದಿಲ್ಲ, ಶಕ್ತಿ ಸಿಕ್ಕುವುದಿಲ್ಲ. ಆದ್ದರಿಂದ ತಾವು ಅವರ ವಾದವನ್ನು ತಳ್ಳಿಹಾಕಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಎರಡನೆಯದು ಮಾನ್ಯ ಖರ್ಗೆಯವರು ತಮ್ಮ ಮುಂದೆ ಮಂಡಿಸಿದ ವಾದವೇ ಬೇರೆ. ಅವನ್ನು ಬಿಟ್ಟು ಮಾನ್ಯ ಮೊಯ್ಲಿಯವರು ಅವರದೇ ಆದಂಥ ವಾದನ್ನು ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ಸನ್ಮಾನ್ಯ ಮೊಯ್ಲಿಯವರ ಉವಾಚ ಅಥವಾ ಸನ್ಮಾನ್ಯ ಖರ್ಗೆಯವರ ಉವಾಚ. ಇದು ಮಾನ್ಯ ಹೆಗಡೆಯವರ ಉವಾಚವಲ್ಲ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮೊಯ್ಲಿಯವರು ಇಲ್ಲಿ ನಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಲೇಬೇಕು ಪತ್ರಿಕೆಗಳಲ್ಲಿ ಪ್ರಶ್ನೆಗಳನ್ನು ಕೇಳುತ್ತೇವೆ, ಎಂಬ ಹೊಸ ವಿಚಾರವನ್ನು ಹೇಳಿದ್ದಾರೆ. ಆದರೆ, ಅವರು ಮಂತ್ರಿಗಳಾಗಿದ್ದಾಗ, ನಾವು ಈ ವಿಧವಾದ ವಾದವನ್ನು ಅವರ ಮುಂದೆ ಇಡಲಿಲ್ಲ. ಸಂಪೂರ್ಣವಾದ ಉತ್ತರ ಯಾವರೀತಿ ಕೊಡಬೇಕೆಂಬುದನ್ನು ಕೌಲ್ ಅಂಡ್ ಶಕ್ದರ್‌ನಲ್ಲಿ ಹೇಳಿದೆ. ಬಹುಶಃ ಇದನ್ನು ಅವರು ನೋಡಲಿಲ್ಲ, ಈ ವಾದವನ್ನು ಅವರು ಮರೆತಿದ್ದಾರೆ. ಪೇಜ್ ೨೩೫ರಲ್ಲಿ ಹೇಳಿರತಕ್ಕ ವಿಚಾರ ಈ ರೀತಿ ಇದೆ,

> 'No privilege of Parliament is involved if statement on matters of public interest are not first made in the House and are made outside. Such actions are against conventions and propriety, but do not constitute any basis on which breaches of privilege can be founded.''

ಮೊಯ್ಲಿಯವರು ಹೊಸ ವಾದವನ್ನು ಇಟ್ಟಿದ್ದು, ಮುಖ್ಯ ಮಂತ್ರಿಯವರು ಇಲ್ಲಿ ಹೇಳಬೇಕಾದ್ದನ್ನು ಕೊಚ್ಚಿನ್‌ನಲ್ಲಿ ಹೇಳಿದ್ದಾರೆ, ಆದ್ದರಿಂದ ಹಕ್ಕುಚ್ಯುತಿ ಆಗಿದೆ ಎಂದು ಹೇಳಿದ್ದಾರೆ. ಜೊತೆಗೆ ಇನ್ನು ಮೇಲೆ ಇಲ್ಲಿ ಕೊಡಬೇಕಾದ ಉತ್ತರಗಳನ್ನು ಹೊರಗಡೆ ಹೇಳಿ ಎಂಬ ವಾದವನ್ನು ಇಟ್ಟಿದ್ದಾರೆ. ಈ ವಾದಸರಣಿಯಲ್ಲಿ ತರ್ಕ ಎಲ್ಲಿ ಹೋಯಿತೋ ಗೊತ್ತಿಲ್ಲ. ತರ್ಕ ಎಲ್ಲಾ ವಿತರ್ಕವಾಗಿದೆ. ಆದರೆ ನಾನು ಇದನ್ನು ಕುತರ್ಕ ಎಂದು ಹೇಳುವುದಿಲ್ಲ. ಈ ಮನೆಯಲ್ಲಿ ಹೇಳಬೇಕಾದ ವಿಚಾರವನ್ನು ಹೊರಗಡೆ ಹೇಳುವುದು propriety ಅಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುವುದಿಲ್ಲವೆಂಬುದು ಇದರಲ್ಲಿ ವೇದ್ಯವಾಗಿದೆ. ಇದನ್ನೇ ಸ್ಪೀಕರ್ ಅವರು ಲೋಕಸಭೆಯಲ್ಲೂ ಅನುಸರಿಸಿಕೊಂಡು ಬಂದಿದ್ದಾರೆ. ಮತ್ತು ಈಚೆಗೆ ಬಂದಂತಹ ವಿಷಯಗಳ ಸಂದರ್ಭಕ್ಕೂ ಇದನ್ನೇ ಪುನರುಚ್ಚಾರ ಮಾಡಿ, ಇದರ ಬಗ್ಗೆ ನಿಲುವನ್ನು ಸ್ಪಷ್ಟೀಕರಿಸಿದ್ದಾರೆ.

ಸನ್ಮಾನ್ಯ ಮೊಯಿಲಿಯವರು ಹೇಳುವಂಥ ವಾದದಲ್ಲಿ ಕೂಡಾ ಏನೂ ಹುರುಳಿಲ್ಲ. ಶಮೋ ಭಾಸ್ಕರರಾಗಿ ಅವರು ವಿರಾಜಮಾನವಾಗಿ ಈ ಹೊಸ ಅಧ್ಯಾಯವನ್ನು ಸಂಸತ್ತಿನ ವ್ಯವಹಾರಗಳ ವಿಚಾರದಲ್ಲಿ ಹೇಳುವುದಕ್ಕೆ ಏನು ಪ್ರಯತ್ನವನ್ನು ಮಾಡಿದ್ದಾರೆ, ಅದನ್ನು ಅವರು ಬೇರೆ ಸಮಯದಲ್ಲಿ ಹೇಳಲು ಪ್ರಯತ್ನ ಮಾಡಬಹುದು. ಒಟ್ಟಿನಲ್ಲಿ ಅವರು ಎತ್ತಿದಂಥ ವಾದದಲ್ಲಿ ಯಾವುದೇ ತಿರುಳಿಲ್ಲ. ಅದನ್ನು ತಾವು ತಳ್ಳಿಹಾಕಬೇಕು ಎಂದು ನಾನು ಮನವಿ ಮಾಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಪ್ರೊಫೆಸರ್ ಲಕ್ಷ್ಮೀಸಾಗರ್‌ರವರು, ಸರ್ವಜ್ಞ ಮೂರ್ತಿಗಳು, ಏಕೆಂದರೆ ತರ್ಕ, ವಿತರ್ಕ, ಕುತರ್ಕ ಎಂದು ಎಲ್ಲಾ ತರ್ಕಗಳನ್ನು ಅವರು ಹೇಳಿದರು. ಕೌಲ್ ಅಂಡ್ ಶಕ್ಧರ್‌ನಲ್ಲಿ ಇದ್ದುದನ್ನೆಲ್ಲಾ ಹೇಳಿದರು. ಹೊರಗಡೆ ಸ್ಟೇಟ್‌ಮೆಂಟ್ ಮಾಡಿದರೂ ಸರಿ ಎಂದು ಕೌಲ್ ಅಂಡ್ ಶಕ್ಧರ್‌ನಲ್ಲಿದೆಯೇ ? ದಯಮಾಡಿ ಅದನ್ನು ತಳ್ಳಿಹಾಕಿ. ನೂಕಿ ಹಾಕಿ ಎಂದು ನಮ್ಮ ಲಕ್ಷ್ಮೀಸಾಗರ್‌ರವರು ಹೇಳಿಬಿಟ್ಟರು. ನಾನು ಕೇಳುವುದು ಇಷ್ಟೇ. ಹೌಸ್‌ನಲ್ಲಿ ಸ್ಟೇಟ್‌ಮೆಂಟ್ ಮಾಡುತ್ತೇವೆ ಎಂದು ಪ್ರಾಮಿಸ್ ಮಾಡಿ ಇಲ್ಲಿ ಮಾತು ಕೊಟ್ಟು ಸೋಮವಾರ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿ ಎಲ್ಲಿ ಬೇಕಾದರೂ ಸ್ಟೇಟ್‌ಮೆಂಟನ್ನು ಮಾಡಿದರೂ ಮಾಡಬಹುದು ಎಂದು ಕೌಲ್ ಅಂಡ್ ಶಕ್ಧರ್‌ನಲ್ಲಿ ಎಲ್ಲಿ ಹೇಳಿದ್ದಾರೆ ತೋರಿಸಿ ತಮಗೆ ಗೊತ್ತಿರುವ ಹಾಗೆ ಈ ಮನೆಗೆ ಇರತಕ್ಕಂಥ ಮಾನ್ಯತೆ ಮರ್ಯಾದೆ ಏನು, ಹೇಳಬೇಕಾದಂಥ ಉತ್ತರವನ್ನು ಅವರು ಇದ್ದ ಹಾಗೆ ಹೇಳುತ್ತಾರೆ. ಈಗಲೇ ಹೇಳುತ್ತಾರೆ, ನಾಳೆ ಹೇಳುತ್ತಾರೆ, ಹಿಂದೆ ಹೇಳಿದರು. ಎಂಬುದೆಲ್ಲಾ ಬೇರೆ ವಿಚಾರ. ಇಲ್ಲಿ ಹೇಳಬೇಕಾದಂಥದ್ದನ್ನು ಕೊಚ್ಚಿನ್‌ನಲ್ಲಿಯೋ ಟ್ರಾವೆನ್‌ಕೋರ್‌ನಲ್ಲಿಯೋ ಎಲ್ಲಿ ಬೇಕಾದರೂ ಹೇಳಬಹುದು ಎಂದು ಹೇಳಿದರೆ ಇದು ತರ್ಕವೇ ? ಕುತರ್ಕವೇ ? ವಿತರ್ಕವೇ ? ನಮ್ಮ ಸರ್ವಜ್ಞ ಮೂರ್ತಿಗಳಿಗೆ ಭಾಷೆ ಬರುತ್ತದೆ. ತಾವು ಚೆನ್ನಾಗಿ ಭಾಷಣಮಾಡಿಬಿಟ್ಟರೆ ಇಲ್ಲಿ ಕೊಡುವ ಸ್ಟೇಟ್‌ಮೆಂಟ್ ಎಲ್ಲಿ ಬೇಕಾದರೂ ಕೊಡಬಹುದು ಎಂದು ಹೇಳುವುದಕ್ಕೆ ಸಾಧ್ಯವೇ ? ಅದು ಕೌಲ್ ಅಂಡ್ ಶಕ್ಧರ್‌ನಲ್ಲಿದೆಯೇ ? ತಾವು ಇದೆಲ್ಲವನ್ನು ಯೋಚನೆ ಮಾಡಬೇಕು

(ಗೊಂದಲ)

SRI VEDANTHA HEMMIGE.—There is no validity for that.

ಅಧ್ಯಕ್ಷರು.— ಆಯಿತ್ರೀ, ವೇದಾಂತ ಹೆಮ್ಮಿಗೆಯವರೇ ಕೂತ್ಕೊಳ್ಳಿ ತಾವು.

ಶ್ರೀ ಎಸ್. ಆರ್ ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೊಸದೇನನ್ನೂ ಕೇರಳದಲ್ಲಿ ಹೇಳಲಿಲ್ಲ ಎಂಬ ಮಾತನ್ನು ಹೇಳಿದರು. ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಉತ್ತರವನ್ನು ಕೊಡುವಾಗ ಕೆಲವು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳು ಈ ಮನೆಯಲ್ಲಿ ವ್ಯಕ್ತಮಾಡಿದ್ದಾರೆ. ಅವರು ಹೇಳಿದ ವಿಚಾರಗಳನ್ನು ಈಗಾಗಲೇ ವ್ಯಕ್ತಮಾಡಿದ್ದಾರೆ, ಅದು ಹೊಸದೇನೂ ಅಲ್ಲ. ತಾವೇ ಅರ್ಥಮಾಡಿಕೊಳ್ಳಿ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಉತ್ತರವನ್ನು ಕೊಡುವಾಗ ಮೂರು ನಾಲ್ಕು ಪಾಯಿಂಟ್‌ಗಳನ್ನು ಸಿ.ಬಿ.ಐ. ಬಗ್ಗೆ ಈ ಮನೆಯಲ್ಲಿಯೇ ಈಗಾಗಲೇ ಹೇಳಿಬಿಟ್ಟಿದ್ದಾರೆ. ಈ ರೀತಿ ಹೇಳಿದ್ದರ ಮೇಲೆ ತಾವು ಕೆಲವು ಪ್ರಶ್ನೆಗಳನ್ನು ಕೇಳಿದ್ದೀರಿ. ಆದ್ದರಿಂದ ಹೊಸ ವಿಚಾರ ಇದರಲ್ಲಿ ಏನೂ ಇಲ್ಲ. ಇದರ ಬಗ್ಗೆ ನಿಮ್ಮ ವಾದದಲ್ಲಿ ಕೆಲವು ವಿವರಣೆಯನ್ನು ಕೇಳಿದ್ದೀರಿ. ಅದಕ್ಕೆ ಅವರು ಉತ್ತರವನ್ನು ಕೊಡುತ್ತಾರೆ. ಇನ್ನೊಂದು ವಿಚಾರವನ್ನು ಮಾನ್ಯ ಮೊಯಿಲಿಯವರು ಎತ್ತಿದ್ದಾರೆ, ಅವರು ಪಂಡಿತರು ಇದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಪುಸ್ತಕಗಳನ್ನು ಬರೆದಿದ್ದಾರೆ ಎಂದು ಹೇಳಿದರು, ತಾವೂ ಬರೆಯಿರಿ ತಾವು ನ್ಯೂ ಪಾರ್ಲಿಮೆಂಟರಿ ಸಿಸ್ಟಂ ಅನ್ನು ಕಾಂಪ್ಲಿಮೆಂಟ್ ಮಾಡಿದ್ದು ಗೊತ್ತಾಯಿತು. ತಮ್ಮ ವಿತಂಡವಾದ ನಮಗೆ ಅರ್ಥವಾಗಿದೆ. ಹೊರಗೆ ಪ್ರಶ್ನೆಗಳನ್ನು ಕೇಳಿ ಇಲ್ಲಿ ಉತ್ತರ ಕೊಡಬೇಕೆಂದು ಹೇಳುವ ಮಟ್ಟಕ್ಕೆ ಹೋಗತಕ್ಕಂಥದ್ದು ಸರಿಯಿಲ್ಲ. ನಾನು ಅದನ್ನೇ ಹೇಳುತ್ತಿದ್ದೇನೆ. ಅನೇಕ ಸಲ......

SRI M. VEERAPPA MOILY.—Let him advocate open Parliamentary procedure. ಓಪನ್ ಎಂದು ಹೇಳಿದರೆ ಎಲ್ಲಾ streetಗೆ ಬಂದುಬಿಡುತ್ತದೆ.

ಶ್ರೀ ಎಸ್. ಆರ್ ಬೊಮ್ಮಾಯಿ.—ಗ್ರಾಮ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ ಓಪನ್ ಆಗಿ ಬರಬೇಕು.

ಶ್ರೀ ಎಂ, ವೀರಪ್ಪಮೊಯಿಲಿ.—ಲೆಜಿಸ್ಲೇಚರನೇ ಗ್ರಾಂಡ್ ಸಭೆ ಮಾಡಿ.

ಶ್ರೀಎಸ್.ಆರ್ ಬೊಮ್ಮಾಯಿ.—ಅದೂ ಕಾಲ ಬರಬಹುದು. We are for open democracy. ಗ್ರೀಸ್‌ನಲ್ಲಿರತಕ್ಕಂಥ ಕಾಲ ಬರಬೇಕಾಗುತ್ತದೆ. ಆದರೆ ಇಲ್ಲಿರತಕ್ಕಂಥ ವಿಚಾರ ಹೊಸದೇನು ಅಲ್ಲ. ಈ ಮನೆಯಲ್ಲಿ ಹೇಳಿರುವಂತಹ ವಿಚಾರಗಳನ್ನೇ ಹೇಳಿದ್ದಾರೆ. ಜೊತೆಗೆ ಇದು ಪಾಲಿಸಿ ಮ್ಯಾಟರ್. ಆದ್ದರಿಂದ ಬ್ರೀಚ್ ಆಫ್ ಪ್ರಿವಿಲೇಜ್ ಹೇಗೆ ಆಗುತ್ತದೆ ? ಅನೇಕ ಸಲ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಈ ಸದನ ನಡೆಯುತ್ತಿರುವಾಗ ಹೊರಗಡೆ ಪ್ರಶ್ನೆಯನ್ನು ಕೇಳಿದ್ದು ಉತ್ತರ ಸಹ ಕೊಟ್ಟಿದ್ದಾರೆ. ಈ ಹೌಸ್‌ನಲ್ಲೇ ಅಲ್ಲ. ಇದನ್ನು ಕೇಂದ್ರ ಸರ್ಕಾರದ ಮಂತ್ರಿಗಳು ಮತ್ತು ರಾಜ್ಯ ಸರ್ಕಾರಗಳ ಮಂತ್ರಿಗಳು ಸಹ ಮಾಡಿದ್ದಾರೆ, ಇದು ನಡೆದು ಬಂದಿರತಕ್ಕಂಥ ಸಂಪ್ರದಾಯ. ಸಾರ್ವಜನಿಕರ ಸಮಸ್ಯೆಯನ್ನು ಪತ್ರಿಕೆಗಳ ಮುಖಾಂತರ ಹೇಳಬಹುದು, ಇಲ್ಲಿ ಬಾಯಿ ಮುಚ್ಚಿಕೊಂಡಿರತಕ್ಕಂಥಾದ್ದು ಏನೂ ಇಲ್ಲ. ಅದು ಸಾಧ್ಯವೂ ಇಲ್ಲ. ಆದ್ದರಿಂದ ಅವರು ತಂದಿರತಕ್ಕಂಥ ಸೂಚನೆಯನ್ನು ತಳ್ಳಿ ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ,

ಶ್ರೀ ಎಂ, ವೀರಪ್ಪಮೊಯ್ಲಿ.— ಮಾನ್ಯ ಅಧ್ಯಕ್ಷರೇ...

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯಅಧ್ಯಕ್ಷರೇ. A Statement made by a Minister outside the House when the House is sitting is not a breach of privilege. but it is a breach of courtesy''. ಎಂದು ನಮ್ಮ ವಿರೋಧಪಕ್ಷದ ನಾಯಕರು ತಮ್ಮ ಜಾಗದಲ್ಲಿ ಕುಳಿತುಕೊಂಡಿದ್ದಾಗ ಕೊಟ್ಟಂತಹ ತೀರ್ಪು ಇದು. ಅವರು ಬಹುಶಃ ಇದನ್ನು ಮರೆತಿರಬಹುದು, ಅವರಿಗೆ ನಾನು ನೆನಪು ಮಾಡಿ ಕೊಡುತ್ತೇನೆ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ — ನನಗೆ ಸಂಪೂರ್ಣವಾಗಿ ನೆನಪು ಇದೆ-

ಅಧ್ಯಕ್ಷರು.—ನೀವು ಹಾಕಿ ಕೊಟ್ಟ ದಾರಿಯಲ್ಲೇ ಹೋಗೋಣವೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ, ವೀರಪ್ಪಮೊಯ್ಲಿ.— ಮಾನ್ಯ ಕಾನೂನು ಸಚಿವರು ನಮಗಿಂದು ಒಳ್ಳೆಯ ಪಾಠ ಹೇಳಿ ಕೊಡುತ್ತಾರೆಂದು ನಾನು ಅಂದು ಕೊಂಡಿದ್ದೆ. ಅವರು ಪ್ರೊಫೆಸರ್ಸ್ ಇದ್ದಾರೆ. ಅವರು ಹೇಳಿದ ಮೇಲೆ ತರ್ಕಬದ್ಧವಾಗಿರುತ್ತದೆಂದು ನಾನು ಕುಳಿತುಕೊಂಡೆ. ಆದರೆ ಅವರು ಮಾಡಿದ ವಾದವನ್ನು ನೋಡಿದರೆ ವಾದ ಒಂದು ಕಡೆ ತೀರ್ಮಾನವು ಸಹ ಆ ಕಡೆಯೋ ? ಅವರು ಹೇಳಿದಂತೆ ತೀರ್ಮಾನ ಒಂದೇ ಕಡೆ ಆಗುತ್ತದೆ. ತಾವು ಕೌಲ್ ಅಂಡ್ ಶಕ್ದರ್ ಪುಸ್ತಕದ ಪುಟ ೨೩೫ನ್ನು ನೋಡಿ. ಇದರಲ್ಲಿ ಏನಿದೆ ?

> "No privilege of parliament is involved if a statement on matter of public interest are not first made in the House and are made outside.''

ಇದು ಆ ಕೇಸು ಅಲ್ಲವೇ ಅಲ್ಲ. ಅವರ ಹತ್ತಿರ ಏನಾದರೂ ಕೇಸ್ ಕೊಟ್ಟರೆ ...

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದರಲ್ಲಿ ತಪ್ಪೇನಿದೆ ? ಇದರಲ್ಲಿ ಬ್ರೀಚ್ ಆಫ್ ಪ್ರಿವಿಲೇಜ್ ಏನಿದೆ ? ಅವರು ಪ್ರಾರಂಭದಲ್ಲಿ ಮಂಡಿಸಿದ ವಿಷಯಕ್ಕೆ ಉತ್ತರ ಅದು.

ಶ್ರೀ ಎಂ. ವೀರಪ್ಪಮೊಯಿಲಿ,— ನೀವು ಜಡ್ಜ್ ಏನಾದರೂ ಆದರೆ ತಪ್ಪಿಲ್ಲದ ಕೇಸಿನಲ್ಲಿ ಮರಣ ದಂಡನೆ ಕೊಡುತ್ತೀರಿ.

ಶ್ರೀ ಎಂ. ರಘುಪತಿ,— ಮಾನ್ಯ ಮೊಯ್ಲಿಯವರು ಈಗ ಆ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಸಾರ್ವಜನಿಕರ ಹಿತಾಸಕ್ತಿಯ ಪ್ರಶ್ನೆ ಇದು ಅಲ್ಲ, ಇಲ್ಲಿರತಕ್ಕಂಥಾದ್ದು ಹೇಳಿಕೆಯ ಪ್ರಶ್ನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಚರ್ಚೆಗೆ ನೀಡಿದ ಉತ್ತರ ಅಷ್ಟೇ. ಇಲ್ಲಿ ಪಬ್ಲಿಕ್ ಇಂಟ್ರೆಸ್ಟ್ ಎಲ್ಲಿ ಬರುತ್ತದೆ ? ಆ ಬಗ್ಗೆ ಯಾರು ವಾದ ಮಾಡಿಲ್ಲ. ನಮ್ಮ ನಾಯಕರು ಆ ಬಗ್ಗೆ ಸ್ಪಷ್ಟವಾಗಿ ಸೂಕ್ಷ್ಮವಾಗಿ ತಮಗೆ ಮನದಟ್ಟು ಮಾಡಿದ್ದಾರೆ. ಹೇಳಿಕೆ ಕೊಡತಕ್ಕಂಥ ಕೆಲಸವನ್ನು ಅವರು ಹೊರಗಡೆ ಮಾಡಿದ್ದಾರೆ. ಆದ್ದರಿಂದ ನಮ್ಮ ಸೂಚನೆಗೆ ಅವಕಾಶ ಕೊಡಿ. ಅವರು ಈ ಸದನದ ಹೊರಗಡೆ ನಿಯಮ ೬೯ಕ್ಕೆ ಉತ್ತರ ಕೊಡುವ ಕೆಲಸ ಮಾಡಿದ್ದಾರೆ. ಅದು ಬ್ರೀಚ್ ಆಫ್

ಪ್ರಿವಿಲೇಜ್ ಆಗುತ್ತದೆ. ಇಲ್ಲಿ ಉತ್ತರ ಕೊಡುತ್ತೇನೆಂದು ಹೇಳಿದ ಮುಖ್ಯ ಮಂತ್ರಿಗಳು ಇದ್ದಕ್ಕಿದ್ದಂತೆ ಕೇರಳದಲ್ಲಿ ತಲೆ ಎತ್ತಿ ಹೇಳಿಕೆ ಕೊಟ್ಟಿಗತಕ್ಕಂಥಾದ್ದು ಇದು. He jumped into the sea and raised his head in Kerala. ಇದು ಯಾವ ಕನ್‌ವೆನ್‌ಷನ್ ಮತ್ತು ಪ್ರೊಸಿಜರ್ ಪ್ರಶ್ನೆಯಲ್ಲ. ಆದ್ದರಿಂದ ಇದರ ಮೇಲೆ ಮಾತನಾಡಲು ದಯಮಾಡಿ ನಮಗೆ ಅವಕಾಶ ಮಾಡಿ ಕೊಡಿ, ಇಲ್ಲವೇ ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಿ.

೧೨-೩೦ ಪಿ. ಎಂ.

ಅಧ್ಯಕ್ಷರು.— ಈಗ ರೂಲಿಂಗ್ ಕೊಡುತ್ತೇನೆ. ಹಕ್ಕು ಚ್ಯುತಿ ಪ್ರಶ್ನೆಯನ್ನು ಮಾನ್ಯ ಖರ್ಗೆಯವರು ಮಾನ್ಯ ಮುಖ್ಯ ಮಂತ್ರಿಗಳ ವಿರುದ್ಧ ಎತ್ತಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ನಾನು ಹೊಸದಾಗಿ ಏನೂ ಹೇಳಿಲ್ಲ. ವಿಧಾನಸಭೆಯಲ್ಲಿ ಏನು ವಿಷಯವನ್ನು ಹೇಳಿದ್ದೆನೋ ಅದೇ ವಿಷಯವನ್ನು ಅಲ್ಲಿ ಹೇಳಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಖರ್ಗೆಯವರು ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ ಎಂದು ಹೇಳುತ್ತಾರೆ. ಹಾಗೂ ಅವರು ಚರ್ಚೆಗೆ ಅವಕಾಶ ಕೊಡಿ ಎಂದು ಹೇಳುತ್ತಾರೆ ಈಗ ಕೌಲ್ ಮತ್ತು ಶಕ್ದರ್ ಪುಸ್ತಕದಲ್ಲಿ ಈ ಬಗ್ಗೆ ಏನು ಹೇಳುತ್ತದೆ ಎಂದರೆ, "No privilege of Parliment is involved if statements on matter of public interest are not first made in the House and are made outside. Such actions are against conventions and propriety but do not constitute any basis on which breach of privileges can be founded. ಇಲ್ಲಿ ಮೊದಲು ಹೇಳದೇ ಬೇರೆ ಕಡೆ ಹೇಳಿದರೂ ಪ್ರಿವಿಲೇಜ್ ಆಗುವುದಿಲ್ಲವೆಂದು ಅವರು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದಕ್ಕೂ ಮೊದಲು ನಮ್ಮ ಮಾತನ್ನು ತಾವು ಕೇಳಬೇಕು.

ಅಧ್ಯಕ್ಷರು.— ಈಗ ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ — ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.— ಈಗ ನಾನು ರೂಲಿಂಗ್ ಕೊಡುತ್ತೇನೆ. ನಾನು ಅವರು ಹೇಳಿದ್ದನ್ನೂ ಕೇಳಿದ್ದೇನೆ. ನೀವು ಹೇಳಿದ್ದನ್ನೂ ಕೇಳಿದ್ದೇನೆ. ನೀವು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ ಎಂದು ಹೇಳುತ್ತೀರಿ (ವಿರೋಧ ಪಕ್ಷದವರನ್ನು ಉದ್ದೇಶಿಸಿ) ಅವರು ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಹೇಳಿದ್ದಾರೆ. ಮುಖ್ಯ ಮಂತ್ರಿಯವರು ನಾನು ಹೊಸದಾಗಿ ನಾನು ಏನು ಹೇಳಿಲ್ಲ. ಅಸೆಂಬ್ಲಿಯಲ್ಲಿ ಹೇಳಿದ್ದನ್ನೇ ಅಲ್ಲೂ ಹೇಳಿದ್ದೇನೆ ಎಂದು ಹೇಳಿದ್ದಾರೆ. 'ಶಕ್ದರ್ ಮತ್ತು ಕೌಲ್' ಪುಸ್ತಕದಲ್ಲಿ ಏನು ಇದೆ ಎಂಬುದನ್ನು ನಾನು ಓದಿ ಹೇಳಿದ್ದೇನೆ. ಆದ್ದರಿಂದ ನೀವು ಏನು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದೀರೋ ಅದು ಪ್ರೈಮಾಫೇಸಿ ಕೇಸ್ ಅಲ್ಲವೆಂದು ಹೇಳಿ ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡುವುದಕ್ಕೆ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ.

ನೀವು ಅರಿತಂ ನುರಿತಂಥವರು ವಿರೋಧಪಕ್ಷದಲ್ಲಿ ಚೆನ್ನಾಗಿ ಕೆಲಸ ಮಾಡುವವರು ನೀವಾಗಿದ್ದೀರಿ. ಈಗ ನಾನು ರೂಲಿಂಗ್ ಕೊಟ್ಟುಬಿಟ್ಟಿದ್ದೇನೆ. ಮೇಲ್ನೋಟಕ್ಕೆ ಏನೂ ಇದರಲ್ಲಿ ಇಲ್ಲವೆಂದು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡುವುದಕ್ಕೆ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ. ಆದ್ದರಿಂದ ಈಗ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ — ರೂಲ್ ೧೯೩ ಸಬ್ ಕ್ಲಾಸ್ ೨೮ ಪ್ರಕಾರ......

ಅಧ್ಯಕ್ಷರು.— ಈಗ ಮುಖ್ಯ ಮಂತ್ರಿಯವರಿಂದ ಉತ್ತರ ಕೇರಳದ ಶ್ರೀ ರಷೀದ್ ಎಂಬ ವಕೀಲರ ಕೊಲೆ ಪ್ರಕರಣದಲ್ಲಿ ಮಾಜಿ ಗೃಹ ಸಚಿವರ ರಾಜೀನಾಮೆಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ನಡೆದ ಚರ್ಚೆಗೆ ಮಾನ್ಯ ಮುಖ್ಯ ಮಂತ್ರಿಯವರ ಉತ್ತರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೧೯೩ ಸಬ್‌ಕ್ಲಾಸ್ ೨೮ ಪ್ರಕಾರ......

ಅಧ್ಯಕ್ಷರು.— ರೂಲಿಂಗ್ ಕೊಟ್ಟ ಮೇಲೆ ಏನೂ ಹೇಳುವಂತಿಲ್ಲ, ತಾವು ಅನುಭವಸ್ಥರು, ಒಮ್ಮೆ ಜಡ್ಜ್‌ಮೆಂಟ್ ಆದಮೇಲೆ ಚರ್ಚೆ ಇಲ್ಲ, ದಯವಿಟ್ಟು ಕೂಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.— ಖರ್ಗೆಯವರೇ, ನೀವು ಸಚಿವರಾಗಿ ಕೆಲಸ ಮಾಡಿದ್ದೀರಿ. ಈಗ ವಿರೋಧ ಪಕ್ಷದ ಉಪ ನಾಯಕರಾಗಿದ್ದೀರಿ. ನೀವು ದಯಾವಿಟ್ಟು ಕೂಡ್ರಿ. ನಾನು ಅಲೋ ಮಾಡುವುದಿಲ್ಲ. I have already given my ruling.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ,

ಅಧ್ಯಕ್ಷರು.— ದಯವಿಟ್ಟು ಕೂಡ್ರಿ.

SRI M. VEERAPP MOILY,— If you have refused, we have the course open.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಉತ್ತರ ಹೇಳಿದ ಮೇಲೆ ಹೇಳಿ,

ಅಧ್ಯಕ್ಷರು.— ನಾನು ರೂಲಿಂಗ್ ಕೊಟ್ಟಾಗಿದೆ. ನೀವು ಏನು ಹೇಳಿದರೂ ನಾನು ಕೇಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ತಾವು ರೂಲಿಂಗ್ ಕೊಡುವುದಕ್ಕಿಂತ ಮೊದಲೇ ನಾನು ಒಂದು ವಿಷಯವನ್ನು ಎತ್ತಿದ್ದೆ.

ಅಧ್ಯಕ್ಷರು,— ಈಗ ರೂಲಿಂಗ್ ಕೊಟ್ಟಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ರೂಲಿಂಗ್ ಕೊಡುವ ಮೊದಲೇ ನಾನು ಈ ವಿಷಯವನ್ನು ಎತ್ತಿದ್ದೆ. ನಾವು ಇಲ್ಲಿ ೧೦ ಮೆಂಬರ್ಸ್ ಇದ್ದೇವೆ. ನಾವು ಈ ವಿಚಾರವನ್ನು ಎತ್ತುತ್ತೇವೆಂದು ಹೇಳುವುದಕ್ಕೂ ತಾವು ಅವಕಾಶ ಕೊಡಲಿಲ್ಲ. ಮಾನ್ಯ ಕಾನೂನು ಸಚಿವರು ಏನು ಹೇಳಿದರು ಎಂದರೆ ಅದು ಈಗ ಬರುವುದಿಲ್ಲ. ಆಮೇಲೆ ಬರುತ್ತದೆಂದು ಹೇಳಿದ್ದರು.

ಅಧ್ಯಕ್ಷರು.—ತಾವು ದಯವಿಟ್ಟು ಕೂಡ್ರಿ. ನಾನು ನೀವು ಹೇಳಿದ್ದಕ್ಕೆ ಕನ್‌ಸೆಂಟ್ ಕೊಟ್ಟಿರಲಿಲ್ಲ ಕನ್‌ಸೆಂಟ್ ಕೊಟ್ಟಿದ್ದಿದ್ದರೆ ಅದು ಬೇರೆ ಪ್ರಶ್ನೆಯಾಗುತ್ತಿತ್ತು. "The Speaker if he gives consent under rule 190 and holds that the matter proposed to be discussed is in order, shall after the questions and before the list of business is entered upon, call the member concerned who shall rise in his place and while asking for leave to raise the question of privilege make a short statement relevant thereto: I have not given consent under rule 190. ನಾನು ಕನ್‌ಸೆಂಟ್ ಕೊಡದೇ ಇದ್ದುದರಿಂದ ಈಗ ಆ ಪ್ರಶ್ನೆ ಬರುವುದಿಲ್ಲ.

SRI M. VEERAPPA MOILY.— Provided that where the Speaker has refused his consent......

ಅಧ್ಯಕ್ಷರು — ನಿಮ್ಮ ಬಗ್ಗೆ ಗೌರವ ನನಗಿದೆ. ನೀವು ಮಂತ್ರಿಗಳಾಗಿ ಉತ್ತಮವಾದ ಕೆಲಸಗಳನ್ನು ಮಾಡಿದ್ದೀರಿ. ವಿರೋಧ ಪಕ್ಷದ ನಾಯಕರಾಗಿ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಿದ್ದೀರಿ ನಿಮಗೆ ಚೆನ್ನಾಗಿ ಗೊತ್ತಿದೆ ನಾನು ರೂಲಿಂಗ್ ಕೊಟ್ಟ ಮೇಲೆ ಆ ರೂಲಿಂಗನ್ನು ಪ್ರಶ್ನೆ ಮಾಡುವುದು ಸರಿಯಲ್ಲ. ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಸಹ ಸ್ಪೀಕರ್ ಆಗಿ ಕೆಲಸ ಮಾಡಿದ್ದಾರೆ. ತಾವು ಅರಿತು ನುರಿತವರು. ದಯವಿಟ್ಟು ತಾವು ಕುಳಿತುಕೊಳ್ಳಿ.

(Interuption)

SRI M. VEERAPPA MOILY.—You must clarify us for our guidance.

MR. SPEAKER.—I will not hear you. I have already given my ruling.

SRI M. VEERAPPA MOILY.—At what point of time rule 193 (2) could be invoked ? Please clarify us.

SRI A. LAKSHMISAGAR.—He is questioning your authority.

SRI M. MALLIKARJUNA KHARGE —We have accepted your ruling. However. you please clarify us as to when rule 193 (2) could be invoked. If the Government refuses then you can allow us. As per rule 193 (2). if objection to leave be granted is taken, the Speaker shall request those members who are in favour of leave being granted to rise in their places and if not less than ten members rise accordingly, the speaker shall intimate that leave is granted. If less than ten members rise, the Speaker shall inform the members that he has not leave of the House. There are ten members The Government has taken objection not to take up this matter. You have to permit us according to this rule 193 (2)

SRI S. R. BOMMAI.—The Hon. Members Sri Kharge and Mr. Moily have raised a question that when this rule 193 (2) comes into operation. My submission is, if the Speaker gives consent under rule 190, then there is a scope for preliminary submission under rule 193 (2). We have opposed.

SRI MALLIKARJUNA KHARGE.— The Speaker has given consent to raise the matter. The Chief Minister has replied. We have already raised the matter and we spoke.

SRI S. R BOMMAI.—Sir, you have rejected their request under rule 190, and therefore, rule 193 will not come into operation at all,

MR. SPEAKER.—I have not given my consent. I have already given my ruling.

SRI. M. VEERAPPA MOILY.—How can the procedure be discarded? We would like to know from the Chair, at what point of time rule 193 (2) can beinvoked.

MR. SPEAKER.—I have already told that that there is no prima facie case. I have already given my ruling.

SRI M. VEERAPPA MOILY.—We ars not questioning the ruling.

ಅಧ್ಯಕ್ಷರು.—ಮೇಲ್ನೋಟಕ್ಕೆ ಕೇಸ್ ಇದೆ ಎಂದಾಗಿದ್ದರೆ ಇದನ್ನು ಚರ್ಚೆಗೆ ಅಲೋ ಮಾಡು ತ್ತಿದ್ದೆ ಅಥವಾ ಒಂದೇ ಸಲ ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡುತ್ತಿದ್ದೆ.

I have already given ruling that the matter has been closed. I have already called the Chief Minister to give reply. ಈಗ ಯಾರು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ. ರಷೀದ್ ಕೇಸ್ ಬಗ್ಗೆ ಉತ್ತರ ಕೊಡಲಿಕ್ಕೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆದಿದ್ದೇನೆ.

SRI M. VEERAPPA MOILY.—The leave could be granted or refused only under 192. You can even suspend the entire rule and conduct the procedings. We know your power. You are supreme However, if we are to be governed by rules, we have to follow certain procedure. I think, we have to follow these rules.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇಬ್ಬರು ಅನುಭವೀ ಮಾನ್ಯ ಸದಸ್ಯರು ತಮ್ಮ ರೂಲಿಂಗ್ ಆದ ಮೇಲೂ ಕೂಡ......

SRI M. VEERAPPA MOILY.—You are responsible for it.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಅದನ್ನೇ ಹೇಳಿದೆ. ತಾವು ಕೊಶನ್ ಮಾಡಿದ್ದೀರಿ. ಈ ವಿಚಾರದಲ್ಲಿ ಹೆಚ್ಚು ಜಿಜ್ಞಾಸೆಗೆ ಅವಕಾಶವಿರಲಿಲ್ಲ. ಅವರು ಹೊಸದಾಗಿ ಆರಿಸಿ ಬಂದು ರೂಲಿಂಗ್ ಮತ್ತು ಕನ್‌ವೆನ್‌ಷನ್ ಗೊತ್ತಿಲ್ಲದೇ ಇದ್ದು ಈ ರೀತಿ ಒತ್ತಾಯ ಮಾಡಿದ್ದರೆ ನಾವು ಅರ್ಥ ಮಾಡಿಕೊಳ್ಳಬಹುದಿತ್ತು. ಈಗ ಈ ಸಭೆಯ ಎಷ್ಟು ಸಮಯ ಖರ್ಚಾಯಿತೆಂಬುದನ್ನು ಅವರು ಯೋಚನೆ ಮಾಡಬೇಕು. ನಾನು ಪುನ: ಹೇಳಲಿಕ್ಕೆ ಬಯಸುತ್ತೇನೆ. ಈ ಸಭೆಯಲ್ಲಿ ಯಾವ ಒಂದು ಮಾತನ್ನು ಹೇಳಲಿಲ್ಲವೋ ಅಂತಹ ಒಂದು ಮಾತನ್ನು ಕೂಡ ಅಲ್ಲಿ ಹೇಳಲಿಲ್ಲ. ನನಗೂ ಈ ಶಾಸನ ಸಭೆಯ ಕಾರ್ಯಕಲಾಪಗಳ ಮತ್ತು ನಿಯಮಾವಳಿಗಳ ಅನುಭವ ಹೆಚ್ಚಿನ ರೀತಿ ಇದೆ ಇದರ ಅರಿವು ಇದ್ದು ನಾನು ಅಲ್ಲಿಗೆ ಹೋಗಿ ಯಾವುದಾದರೂ ಒಂದು ಹೊಸ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುವುದಿಲ್ಲ. ಇಲ್ಲಿ ಮಾನ್ಯ ಮೊಯಿಲಿಯವರು ಮತ್ತು ಮಾನ್ಯ ಖರ್ಗೆಯವರಂತಹ ನಿಷ್ಣಾತ ಪಾರ್ಲಿಮೆಂಟರಿ ಪಟುಗಳು ಇಲ್ಲಿ ಇರುವುದನ್ನು ತಿಳಿದುಕೊಂಡೂ ಕೂಡ ಅಲ್ಲಿ ಹೊಸ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂತಹ ಮೂರ್ಖತನವನ್ನು ನಾನು ಮಾಡುವುದಿಲ್ಲ. ದಯವಿಟ್ಟು ಅವರು ಸಮಾಧಾನಪಟ್ಟುಕೊಳ್ಳಬೇಕು. ನಮ್ಮ ಸದನದ ಇತಿಹಾಸದಲ್ಲಿ ಬಹುಶಃ ಒಬ್ಬ ವ್ಯಕ್ತಿಯ ಮರಣದ ವಿಚಾರದಲ್ಲಿ ಇಷ್ಟೊಂದು ಜಿಜ್ಞಾಸೆಗೆ ಒಳಗಾದ ಇಷ್ಟೊಂದು ಕುತೂಹಲ ಕೆರಳಿಸಿದ ಮತ್ತು ಇಷ್ಟೊಂದು ಚರ್ಚೆಯಾಗಿದ್ದು ಇದೇ ಮೊದಲನೆಯದು.

ಶ್ರೀ ಎಂ. ರಾಮಪ್ಪ.—ಹಿಂದೆ ಲಕ್ಷ್ಮಣ ಬಾಬಾರವರ ಕೇಸ್ ಬಗ್ಗೆ ಇಲ್ಲಿ ಚರ್ಚೆಯಾಯಿತು. ಆಗ ಮಾನ್ಯ ಬೊಮ್ಮಾಯಿಯವರು ಇಲ್ಲಿ ಇದ್ದರು ಆದ್ದರಿಂದ ಇದು ಮೊದಲನೆಯದೇನೂ ಅಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಒಬ್ಬ ವ್ಯಕ್ತಿ ಮರಣಕ್ಕೀಡಾದರೆ ಆ ವ್ಯಕ್ತಿ ಯಾರೇ ಇರಲೀ ದೊಡ್ಡ ವ್ಯಕ್ತಿಯಿರಬಹುದು ಇಲ್ಲವೇ ಸಾಮಾನ್ಯ ವ್ಯಕ್ತಿಯಿರಬಹುದು ಆ ವ್ಯಕ್ತಿಯ ಮರಣ ಏಕಾಯಿತು ಎಂದು ಸರ್ಕಾರ ಹೇಳತಕ್ಕಂಥಾದ್ದನ್ನು ಸಾರ್ವಜನಿಕರು ತಿಳಿದುಕೊಳ್ಳಲಿಕ್ಕೆ ಬಯಸಿದರೆ ಅದರಲ್ಲಿ ಯಾವುದೇ ರೀತಿಯ ತಪ್ಪು ಇಲ್ಲ. ಈ ವ್ಯಕ್ತಿ ಮರಣವಾದಂತಹ ಸುದ್ದಿ ಗೊತ್ತಾದದ್ದು ಯಾವಾಗ ? ನಾನು ಅಲ್ಲಿಗೆ ಮೊದಲು ಹೋಗುತ್ತೇನೆ. ನಾನು ಯಾವುದೇ ರಾಜಕೀಯವನ್ನು ಇಲ್ಲಿ ತರಲಿಕ್ಕೆ ಬಯಸುವುದಿಲ್ಲ. ನಿಷ್ಪಕ್ಷಪಾತವಾದಂತಹ ದೃಷ್ಟಿಯಿಂದ ವಸ್ತು ನಿಷ್ಠೆಯಿಂದ ನೋಡಿ ಸತ್ಯ ಎಷ್ಟರ ಮಟ್ಟಿಗೆ ಹೊರಕ್ಕೆ ಬರುತ್ತದೆಂದು ನಾವು ವಿಚಾರ ಮಾಡಬೇಕು. ಮೊಟ್ಟ ಮೊದಲಿಗೆ ಈ ವಿಚಾರದಲ್ಲಿ ಸತ್ತಂತಹ ವ್ಯಕ್ತಿಯಾದ ಶ್ರೀ ರಷೀದ್‌ರವರ ಸಂಬಂಧಿಕರು ಯಾರಿದ್ದಾರೆ, ಅವರು ಸಿ.ಒ.ಡಿ ಆಫೀಸಿಗೆ ಬಂದು ಒಂದು ಪತ್ರದ ಮುಖಾಂತರ ಈ ವಿಚಾರವನ್ನು ತಿಳಿಸುವುದಕ್ಕೆ ಬಂದರು.

ಅಲ್ಲಿ ಪೋಲೀಸ್ ಅಧಿಕಾರಿಗಳು ಆ ಹೊತ್ತಿಗೆ ಹಾಜರಿರಲಿಲ್ಲ. ಆಗ ಅವರು ಏನು ಮಾಡಿದ್ದಾರೆ ಎಂದರೆ ಅವರ ಟೇಬಲ್ ಮೇಲೆ ಒಂದು ಲಕೋಟೆಯನ್ನು ಬಿಟ್ಟು ಹೋಗಿದ್ದಾರೆ. ಇಲ್ಲಿ ಮೊದಲ ಪ್ರಶ್ನೆ ಏನು ಕೇಳಬೇಕು ಎಂದರೆ, ಯಾವ ಒಬ್ಬ ವ್ಯಕ್ತಿ ಸತ್ತು ಹೋಗಿರುತ್ತಾನೆ ಅವನ ಹತ್ತಿರದ ಸಂಬಂಧಿಕರು ಅದರ ಬಗ್ಗೆ ಏತಕ್ಕೆ ಸತ್ತು ಹೋದ ? ಅದರಲ್ಲಿ ಏನಾದರೂ ಕೊಲೆ ಆಗಿದೆಯೋ ಹೇಗೆ ? ಬೇರೆ ಕಾರಣದಿಂದ ಏನಾದರೂ ಸಾವು ಆಗಿದೆಯೋ ಎಂದು ಒಂದು ಚಿಂತೆ ಮಾಡತಕ್ಕ ಮತ್ತು ಅದನ್ನು ತಿಳಿದುಕೊಳ್ಳತಕ್ಕಂಥ ಲವಲವಿಕೆ ಇರತಕ್ಕಂಥವರು ಆ ವಿಚಾರದಲ್ಲಿ ಪತ್ರವನ್ನು ಮೇಜಿನ ಮೇಲೆ ಇಟ್ಟು ಹೋಗುತ್ತಾರೆಯೋ ? ಅಧಿಕಾರಿ ಬರುವವರೆಗೂ ಕಾಯುವುದಿಲ್ಲವೇ ? ಇದರಲ್ಲಿ ನಮಗೆ ಒಂದು ತರಹ ಸಂದೇಹ ಪ್ರಾರಂಭವಾಗುತ್ತದೆ. ನನ್ನ ಸಂಬಂಧಿಕರು ಆಗಲೀ ಇಲ್ಲವೇ ಮೊಯಿಲಿಯವರ ಸಂಬಂಧಿಕರ ಕೊಲೆ ಆಯಿತು ಎಂದು ಇಟ್ಟುಕೊಳ್ಳೋಣ. ಅಂಥ ಸಂದರ್ಭದಲ್ಲಿ ಒಂದು ಕಂಪ್ಲೇಂಟನ್ನು ಕೊಡಲಿಕ್ಕೆ

ಹೋದಾಗ ಒಂದು ಹತ್ತು ನಿಮಿಷ, ಹದಿನೈದು ನಿಮಿಷ, ಅಥವಾ ಒಂದು ಗಂಟೆ ಆದರೂ ಕಾದು ಅವರಿಗೆ ಪತ್ರ ಕೊಟ್ಟು ಈ ರೀತಿ ಯಾಗಿದೆ ಅದಕ್ಕಾಗಿಯೇ ಬಂದಿದ್ದೇನೆ, ಈ ದೂರನ್ನು ದಯವಿಟ್ಟು ತಕ್ಷಣ ವಿಚಾರ ಮಾಡಬೇಕು ಎಂದು ಹೇಳುವುದು ಸ್ವಾಭಾವಿಕ. ಆದರೆ ಅವರು ಅದನ್ನು ಮಾಡಿಲ್ಲ ಇದಾದ ಮೇಲೆ ನಾವು ಏನಾದರೂ ಇದರಲ್ಲಿ ತಡಮಾಡಿದ್ದೇವೆಯೇ? ಈ ವಿಚಾರ ಸರ್ಕಾರಕ್ಕೆ ಗೊತ್ತಾದದ್ದು ೨೭ನೇ ತಾರೀಖು. ಅದೇ ದಿವಸ ಸಿ.ಒ.ಡಿ. ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದೇವೆ. ಈ ವಿಚಾರ ಬಹಿರಂಗ ಆದಮೇಲೆ ೩೦ನೇ ತಾರೀಖು ನಾನು ಕೇಂದ್ರ ಸರ್ಕಾರಕ್ಕೆ ಇಲ್ಲಿ ಬರುವುದಕ್ಕೆ ಮೊದಲು ಈ ವಿಚಾರದಲ್ಲಿ ಪ್ರಸ್ತಾಪಮಾಡುವುದಕ್ಕಿಂತ ಮೊದಲು ಕೇಂದ್ರಸರ್ಕಾರದ ಗೃಹಮಂತ್ರಿಗಳಿಗೆ ಒಂದು ಟೆಲೆಕ್ಸನ್ನು ಕಳುಹಿಸಿಕೊಟ್ಟೆ ಅದರ ನಂತರ ಒಂದು ಪತ್ರವನ್ನು ಕೂಡಾ ಬರೆದೆ. ಆ ಪತ್ರವನ್ನು ಓದಿ ಹೇಳಿಬಿಡುತ್ತೇನೆ ಇದರಲ್ಲಿ ಸರ್ಕಾರದ ಪ್ರಾಮಾಣಿಕತೆ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಸರ್ಕಾರದ ಉದ್ದೇಶವಾದರೂ ಏನು ಎಂಬುದು ತಮಗೆಲ್ಲಾ ಗೊತ್ತಾಗುತ್ತದೆ. ಸರ್ಕಾರಕ್ಕೆ ಏನಾದರೂ ಇದರಲ್ಲಿ ಅಪ್ರತ್ಯಕ್ಷವಾದಂಥ ಇಂಟರೆಸ್ಟ್ ಇದೆಯೋ, ವೆಸ್ಟೆಡ್ ಇಂಟರೆಸ್ಟ್ ಏನಾದರೂ ಇದೆಯೋ ಎನ್ನುವುದು ಇದರಲ್ಲಿ ಗೊತ್ತಾಗುತ್ತದೆ ? ಈ ಕಾಗದವನ್ನು ಬರೆದದ್ದು ೩೦ನೇ ತಾರೀಖು. ಅದು ಈ ರೀತಿಯಿಂದೆ.

My dear Buta Singh,

I am writing this letter regarding an incident that has attracted a lot of publicity.

One Sri M. A. Rasheed, son of Meeran Rowther, Advocate, Puthuveedu, Petta, Pathanthitta District, Kerala had come to Bangalore to assist his client Sri P. Sadashivan, Chairman, Jawahar Bharathi Education Trust, Bangalore which is having Sanjay Gandhi College of Education at No. 45, Miller Road, Vasanthangar, Bangalore. Sri Sadashivan has sought the service of Sri Rasheed to assist him in OS No.3203/87 filed by him in the Court city Civil Judge against Sri S. Y. Mariyappa and K. R. Srinivasan restraining them by an order of injunction from entering into the premises and interfering with the functioning of the Sanjay Gandhi College of Education. On a complaint filed by Mrs. B. M. Rathna. Principal of the Sanjay Gandhi College of Education. the Bangalore City Highgrounds Police had arrested him for trespassing into the office of the said college. He was later released on bail by the Magistrate on 14-8-1987.

Sri Rasheed's body was reportedly found with injuries near the railway track at Salem in Tamil Nadu on 24-8-1987. The State Police had started investigation about the unnatural death of Sri Rasheed. This is alleged to be a murder and attracted publicity. The State Police have started the investigation in all earnestness. But I find that certain political elements have taken active interest in this incident and certain insinuation is being made For this reason and also since inter-State investigation is involved, I feel that it is better if the CBI takes up this investigation. An independent investigation by the CBI dispels the suspicions entertained by the relatives of Sri Rasheed and others. Hence, I request you to instruct the CBI to take up this investigation early.

With regards,

ಈ ಕಾಗದವನ್ನು ನಾವು ೩೦ನೇ ತಾರೀಖು ಬರೆದಿದ್ದೇವೆ. ಯಾವ ಸರ್ಕಾರ ಇಷ್ಟು ಪ್ರಾಮಾಣಿಕವಾದ ಕ್ರಮ ತೆಗೆದುಕೊಂಡಿದೆ. ಆದರೂ ಇದರ ಮೇಲೆಯೇ, ಏಕೆ ಟೀಕೆ ಮಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ ಮೋಟಿವ್ ಮೇಲೆ ಟೀಕೆ ಮಾಡುತ್ತಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ವಕೀಲರು ಮತ್ತು ಕವಿಗಳು, ನಿಜ. ಅವರು ಮೊನ್ನೆ ಭಾಷಣ ಮಾಡುವಾಗ ಜಾಲಪ್ಪನವರ ಕಡೆಗೆ ಬೆರಳು ತೋರಿಸಿ 'ಇವರೇ ಅಪರಾಧಿ' ಯೆಂದು ಕರೆದರು ಇದನ್ನು ನಾನು ನಂಬುವುದು ಕಷ್ಟವಾಗುತ್ತದೆ ಇಂತಹ ವಕೀಲರಿಗೆ ಅಪರಾಧಿಯಾರು, ಆರೋಪಿಯಾರು ಎಂಬ ಬಗ್ಗೆ ಗೊತ್ತಿಲ್ಲ. ಅವರ ದೃಷ್ಟಿಯಲ್ಲಿ ಜಾಲಪ್ಪನವರು ಅಪರಾಧಿಯಾಗಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಜಡ್ಜ್‌ಮೆಂಟ್ ಕೊಟ್ಟುಬಿಟ್ಟಿದ್ದಾರೆ, ಇದುವರೆಗೂ ರಷೀದ್ ಅವರ ಕೊಲೆ ಆಗಿದೆಯೋ, ಯಾವ ಕಾರಣದಿಂದ ಆಗಿದೆ ಎಂಬ ಬಗ್ಗೆ ಸಾಬಿತು ಸಿಕ್ಕಿಲ್ಲ. ನಾವು ಒಂದು ಸಲ ಪೋಸ್ಟ್ ಮಾರ್ಟಮ್ ಮಾಡಿಸಿದ್ದೇವೆ ಮತ್ತೆ ಎರಡನೆಯ ಸಲವೂ ಮಾಡಿಸಿದ್ದೇವೆ ಇಲ್ಲಿ ಒಂದು ವಿಷಯ ಏನೆಂದರೆ, ರಷೀದ್ ಹೆಣ ಕಂಡಮೇಲೆ, ಮೂರು ದಿವಸಗಳ ನಂತರ ಅಂದರೆ ೨೩ನೇ ತಾರೀಖು ಹೆಣದ ಸಮೀಪ ಒಂದು ಡೈರಿಯಿತ್ತು. ಅದರಲ್ಲಿ ಮನೆಯ ನಂಬರ್ ಟೆಲಿಫೋನ್ ನಂಬರ್ ಇತ್ತು ಅದನ್ನು ಉಪಯೋಗಿಸಿಕೊಂಡು ಟೆಲಿಫೋನ್ ಮಾಡಿದ್ದೆವು ಇದರ ಅರ್ಥ ನಾನು ಹೀಗೆ ಆಗಿದೆ ಎಂದು ಹೇಳುವುದಿಲ್ಲ. ಕೊಲೆ ಮಾಡಿದವನು ಡೈರಿಯನ್ನು ಅಲ್ಲಿಯೇ ಹಾಕಲು ಸಾಧ್ಯವಿಲ್ಲ. ಇನ್‌ವೆಸ್ಟಿಗೇಷನ್ ನಡೆಯುತ್ತಿರುವಂತಹ ಸಂದರ್ಭದಲ್ಲಿ ಇನ್‌ವೆಸ್ಟಿಗೇಷನ್ ಪೂರ್ಣವಾಗದೆ ಇರುವಾಗ ನಾವು ಇಲ್ಲಿ ಕುಳಿತು ಕೊಂಡು ಹಾಗೆ ಮಾಡಿದರು ಹೀಗೆ ಮಾಡಿದರು ಕೊಲೆ ಆಗಿದೆ ಎಂದು ಹೇಳತಕ್ಕದ್ದು ಸರಿಯಲ್ಲ ಮೂರನೆಯ ವಿಚಾರ ಏನೆಂದರೆ ಮಾನ್ಯ ವೀರಪ್ಪ ಮೊಯಿಲಿಯವರು. ವಕೀಲರು, ಕೊಲೆಯನ್ನು ಇದ್ದಕ್ಕಿದ್ದ ಹಾಗೆ ಮಾಡಲು ಸಾಧ್ಯವೆ ? ಕಾರಣವಿಲ್ಲದೆ ಕೊಲೆ ಮಾಡುತ್ತಾರೆಯೇ ? ಅದಕ್ಕೆ ಕಾರಣವೇನೆಂದರೆ ನಿಮ್ಮ ಆರ್ಗ್ಯುಮೆಂಟನ್ನು ತೆಗೆದುಕೊಂಡರೂ ಕೂಡ, tl ere must be mens era. What is the motive here? ಪೋಲೀಸಿನವರಿಗೂ ಶಿಕ್ಷಣ ಸಂಸ್ಥೆಗೂ ರಶೀದ್ ಅವರಿಗೂ ಏನು ಸಂಬಂಧವಿದೆ ? ಸುಮ್ಮ ಸುಮ್ಮನೆ ಯಾರಾದರೂ ಕೊಲೆ ಮಾಡುತ್ತಾರೆಯೇ ? From the word of my friends ನನ್ನ ಕಾಂಗ್ರೆಸ್ ಮಿತ್ರರೂ ಏಕೆ ಈ ವಿಷಯದ ಬಗ್ಗೆ ಇಷ್ಟೊಂದು ಆಸಕ್ತಿ ತೆಗೆದುಕೊಂಡಿದ್ದಾರೋ, ನನಗೆ ಅರ್ಥವಾಗುತ್ತಿಲ್ಲ. ಬೇರೆ ಯಾವ ವಿಷಯದ ಮೇಲೂ ಇಷ್ಟೊಂದು ಇಂಟರೆಸ್ಟ್ ತೆಗೆದುಕೊಂಡಿಲ್ಲ. ಪಾರ್ಲಿಮೆಂಟಿನಲ್ಲಿ ಈ ವಿಷಯ ಎಷ್ಟು ಸಲ ಬಂತು ಒಂದು ಸಲ ಅಲ್ಲ ಎರಡು ಸಲ ಅಲ್ಲ ಮೂರು ಸಲ ಈ ವಿಷಯ ಪ್ರಸ್ತಾಪಕ್ಕೆ ಬಂತು. ನಾನು ಸಿಬಿಐ ವಿಚಾರದಲ್ಲಿ ಬಹಳ ಗೌರವ ಇಟ್ಟುಕೊಂಡಿದ್ದೇನೆ. ಅದು ಒಂದು ಅತ್ಯಾಧುನಿಕವಾದ ಸುಸಜ್ಜಿತವಾದ ಹಾಗೂ ನಂಬಿಕೆ ಇರುವಂತಹ ಒಂದು ಸಂಸ್ಥೆ ಅದನ್ನು ಬೇರೆ ದೇಶದ ಸಂಸ್ಥೆಗಳಿಗೆ ಹೋಲಿಕೆ ಮಾಡಬಹುದು. ನಾನು ಟೀಕೆ ಮಾಡುವಾಗ C. B. I institution as such ಬಗ್ಗೆ ಟೀಕೆ ಮಾಡುತ್ತಿಲ್ಲ. ಅಥವಾ ಆ ಸಂಸ್ಥೆಯ ಆಫೀಸರ್‌ಗಳ ಬಗ್ಗೆ ಟೀಕೆ ಮಾಡುತ್ತಿಲ್ಲ. ಆದರೆ ರಾಜಕೀಯವಾಗಿ ದುರುಪಯೋಗ ಮಾಡಿಕೊಳ್ಳುವ ಪ್ರಯತ್ನ ನಡೆದಿದೆ ಎಂದು ಹೇಳಿದ್ದೇನೆ. ಮಾನ್ಯ ಕೆ. ಹೆಚ್. ಪಾಟೀಲರಿಗೆ ಅಥವಾ ವೀರಪ್ಪ ಮೊಯಿಲಿಯವರಿಗೆ ನೆನಪಿರಬಹುದು. ಹಿಂದೆ ಶ್ರೀಮಾನ್ ಎಲ್. ಎನ್. ಮಿಶ್ರ ರವರ ಮರ್ಡರ್ ಆಯಿತು ಇದರ ಬಗ್ಗೆ ಸಿ. ಬಿ. ಐ. ಮೊದಲು ಹಿಡಿದದ್ದು ಏನು ? ಅದರ ನಂತರ ಅದಕ್ಕೆ ಯಾವ ರೂಪ ಬಂತು ?

ನಾವು ಒಂದು ನಂಬಿಕೆಯಿಂದ ಕೆಲಸ ಮಾಡಬೇಕಾಗುತ್ತದೆ. ಯಾವುದೇ ರೀತಿಯ ಸಂದೇಹಕ್ಕೆ ಆಸ್ಪದ ಕೊಡಬಾರದು ಎಂದು ನಾವು ಆ ತನಿಖೆಗೆ ಆಜ್ಞೆ ಮಾಡಿದೆವು. ಈ ಬಗ್ಗೆ ಜಾಲಪ್ಪನವರನ್ನು ಕೇಳಿದ್ದಕ್ಕೆ ಏನು ಹೇಳಿದರು ಗೊತ್ತೇ? ಸಿ ಬಿ.ಐ ಗೆ ಕೊಡಿ ಅಥವಾ ದೇವರೇ ಬಂದು ತಪಾಸಣೆ ಮಾಡಲಿ ಎಂದು ಹೇಳಿದರು. ಇಷ್ಟೊಂದು ಪ್ರಾಂಜಲತೆಯಿಂದ ವಿಶ್ವಾಸದಿಂದ ಅವರು ಹೇಳುತ್ತಿರುವಾಗ ಅವರ ವಿರುದ್ಧ ಇಷ್ಟು ಟೀಕೆ ಮಾಡಬೇಕೇ? ತಪ್ಪು ಆಗಿದ್ದರೆ ಸರಿ. ರಶೀದನ ಮೇಲೆ ಇವರಿಗೆ ಕೋಪ ಇತ್ತೇ? ಸಿಟ್ಟು ಇತ್ತೇ? ಅಥವಾ ರಶೀದ್ ಏನು ಇವರಿಗೆ ಹಾನಿ ಮಾಡಿದ್ದಾರೆಯೇ? ಕೆಡುಕು ಮಾಡಿದ್ದರೇ? ವೈಯಕ್ತಿಕ ದ್ವೇಷ ಇದೆಯೇ?

ಶ್ರೀ ಎಸ್. ಎಂ. ಅದ್ಯಂತಾಯ.— ಸದಾಶಿವನ್‌ರವರ ವಕೀಲರಾದ

(ಗೊಂದಲ)

ಅಧ್ಯಕ್ಷರು.— ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗ್ಡೆ.— ಹಾಗಿದ್ದರೆ...

ಶ್ರೀ ಎನ್. ಎಂ. ಅಡ್ಯಂತಾಯ.— ಸಂಜಯಗಾಂಧಿ ಟ್ರಸ್ಟ್‌ಗೆ... (ಗೊಂದಲ) ಅವರು ಕಾರಣ ಕೇಳಿದರು. ಪಾರ್ಲಿಮೆಂಟಿನಲ್ಲಿ ಈ ವಿಷಯ ... (ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.— ಹಾಗಿದ್ದರೆ ಕೊಲೆ ಆದ ವ್ಯಕ್ತಿ ಸದಾಶಿವನ್ ಎಂದು...

ಶ್ರೀ ಎನ್. ಎಂ. ಅಡ್ಯಂತಾಯ.— ಅವರು ಸದಾಶಿವನ್‌ರವರ ವಕೀಲರಾಗಿ ... (ಗೊಂದಲ)

ಶ್ರೀ ರಾಮಕೃಷ್ಣ ಹೆಗ್ಡೆ.— ರಶೀದ್‌ಗೂ ಆ ಮೆಡಿಕಲ್ ಕಾಲೇಜಿಗೂ ಏನು ಸಂಬಂಧ? ಲಾಯರ್ ಆಗಿ ಕೂಡಾ ಅವರು ಬಂದಿಲ್ಲ. (ಗೊಂದಲ)

ಶ್ರೀ ಎನ್.ಎಂ. ಅಡ್ಯಂತಾಯ.— ಅವರು ಸದಾಶಿವನ್‌ರವರ ವಕೀಲರಾಗಿದ್ದರು ಸಂಪೂರ್ಣ ರೆಕಾರ್ಡ್ಸ್ ಅವರ ಕೈಯಲ್ಲಿತ್ತು, (ಗೊಂದಲ)

ಅಧ್ಯಕ್ಷರು.— ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗ್ಡೆ.— ಅಲ್ಲಿನ ಮೆಡಿಕಲ್ ಕಾಲೇಜಿದು ಇತ್ಯರ್ಥ ಹೈಕೋರ್ಟ್ ಮಾಡಿ ಆಗಿದೆ. ಹೈಕೋರ್ಟಿನಲ್ಲಿ ವಕೀಲಿ ಮಾಡುವುದಕ್ಕೆ ಬಂದಿಲ್ಲ. ರಶೀದ್ ಬಂದಿದ್ದು. ೯ನೇ ತಾರೀಖು ಅಲ್ಲ. ಆದುದರಿಂದ ಏನಾದರೂ ಸದಾಶಿವನ್ ಒಂದೊವ್ಮೆ ಕೊಲೆಯಾಗಿದ್ದರೆ ಆಗ ಬಹಳ ಎಳೆದೂ ಎಳೆದೂ ಎಳೆದೂ ಹಾಕುತ್ತಿದ್ದಿರಿ. ಇಲ್ಲಿ ಸದಾಶಿವನ್ ಕೊಲೆಯಾಗಿದ್ದಾರೆಯೋ? ರಶೀದ್ ಪಾಪ ಯಾರು? ಏನು ಮಾಡಿದ್ದಾರೆ? ಆದುದರಿಂದ ಇದರಲ್ಲಿ ಅವರ ಪಾತ್ರ ಇಲ್ಲ. ನಾನು ಹೇಳುತ್ತಿದ್ದೇನೆ, ಈಗ ಸಿಬಿಐ ವಿಚಾರದಲ್ಲಿ ಕೆಲವೊಂದು...

ಶ್ರೀ ಡಿ.ಎ. ಚಿನ್ನಪ್ಪ.— ಅಧ್ಯಕ್ಷರೇ. ಮಾನ್ಯ ಮುಖ್ಯ ಮಂತ್ರಿಯವರು...

ಶ್ರೀ ರಾಮಕೃಷ್ಣ ಹೆಗ್ಡೆ.— ನಾನು ಈಲ್ಡ್ ಆಗುವುದಿಲ್ಲ. (ಗೊಂದಲ)

ಶ್ರೀ ಡಿ.ಎ. ಚಿನ್ನಪ್ಪ.— ರಶೀದ್ ಹಾಗಿದ್ದರೆ ಬದುಕಿಬರಬೇಕಲ್ಲವೇ? (ಗೊಂದಲ)

ಅಧ್ಯಕ್ಷರು.— ಮಾನ್ಯ ಮುಖ್ಯಮಂತ್ರಿಗಳು ಬಿಟ್ಟು ಬೇರೆ ಯಾರೂ ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಮಾತನಾಡುವುದಕ್ಕೆ ಮುಖ್ಯಮಂತ್ರಿಗಳಿಗೆ ಅವಕಾಶ ಕೊಟ್ಟಿದ್ದೇನೆ. ಅವರ ಉತ್ತರ ಮುಗಿಯುವವರೆವಿಗೂ ನಿಮಗ್ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಸಿ.ಬಿ.ಐ. ನವರು ದುರುಪಯೋಗ ಮಾಡಿದ್ದಾರೆ, ರಾಜಕೀಯ ಮಾಡಿದ್ದಾರೆ ಎಂದು ಹೇಳುತ್ತಾ ಹೋದರೆ ಹೇಗೆ? ಹಿಗೆ ದುರುಪಯೋಗ ಮಾಡುವುದಕ್ಕಲ್ಲಾ ಈ ವೇದಿಕೆ ಇರುವುದು.

ಶ್ರೀ ರಾಮಕೃಷ್ಣ ಹೆಗ್ಡೆ.— ನೀವು ಏನು ಉಪಯೋಗ ಮಾಡಿಕೊಂಡಿದ್ದೀರಿ?

SRI. M. MALLIKARJUNA KARGE.— You should not do it.

SRI RAMAKRISHNA HEGDE.— So, I should not do it. You can do it. It should be your monopoly. It should be your privilege.

(INTERRUPTION)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಸತ್ಯಾಂಶ ಹೊರಬೀಳುತ್ತದೆ. ತಾವು ಅದನ್ನು ತಡೆಹಿಡಿಯಬೇಡಿ.

ಶ್ರೀ ರಾಮಕೃಷ್ಣ ಹೆಗ್ಡೆ.— ಕೆಲವು ಪ್ರಶ್ನೆಗಳನ್ನು ನಾನು ಇಡುತ್ತೇನೆ. ಬೇರೆ ಮೋಟಿವ್‌ಗೆ ನಾನು ಹೋಗುವುದಿಲ್ಲ. ಪ್ರಶ್ನೆ ಇಲ್ಲಿ, I would like to read certain questions.

೧-೦೦ ಪಿ. ಎಂ.

ಈಗ ಸಿ.ಬಿ.ಐ. ಪರವಾಗಿ, ಯಾರೂ ಹೇಳಿಕೆಯನ್ನು ಕೊಡುತ್ತಿಲ್ಲ. ಅವರ ಮನಸ್ಸಿನಲ್ಲಿ ಇರತಕ್ಕದ್ದು ಏನು ಎಂಬುದು ನಮಗೆ ಹೇಗೆ ಗೊತ್ತಾಗಬೇಕು. ಅವರ ವಕೀಲರಿಂದ ಗೊತ್ತಾಗಬೇಕು. ಅವರ ವಕೀಲರು ಒಂದು ದಿವಸ ಏನು ಹೇಳಿದರು.

(ಈ ಸಂದರ್ಭದಲ್ಲಿ ಇಡೀ ಸದನದ ಧ್ವನಿವರ್ಧಕ ವ್ಯವಸ್ಥೆ ಕೆಟ್ಟು ಹೋಯಿತು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸ್ವಾಮಿ, ಇದರೊಳಗೆ ರಷೀದ್ ಓಡಾಡುತ್ತಿರಬಹುದು. ರಷೀದ್ ದೆವ್ವವಾಗಿ ಬಂದು ವೈರನ್ನು ಎಳೆದಿರಬಹುದು.

ಶ್ರೀ ಎಂ. ವೀರಪ್ಪಮೊಯ್ಲಿ.— ರಷೀದ್ ಈಸ್ ಹಂಟಿಂಗ್ ದಿ ಗೌರ್ನಮೆಂಟ್

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ಸದನವನ್ನು ೧೦ ನಿಮಿಷ ಕಾಲ ಮುಂದೂಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸ್ವಾಮಿ, ೫ ನಿಮಿಷ ಕಾಲ ಅಡ್ಜರ್ನ್ ಮಾಡಿ. ಆಮೇಲೆ ಸೇರೋಣ...

ಅಧ್ಯಕ್ಷರು.— ಈಗ ಸಭೆಯನ್ನು ೧೦ ನಿಮಿಷ ಕಾಲ ಮುಂದೂಡಿದ್ದೇನೆ.

(ಸಭೆಯು ೧ ಗಂಟೆ ೩ ನಿಮಿಷಕ್ಕೆ ಮುಂದೂಡಲ್ಪಟ್ಟಿತು.)

(ಸದನವು ಪುನಃ ಮಧ್ಯಾಹ್ನ ೧-೧೦ಕ್ಕೆ ಸಮಾವೇಶಗೊಂಡಿತು)

ಶ್ರೀ ಬಿ. ಜಿ. ಬಣಕಾರ್ (ಅಧ್ಯಕ್ಷರು) ಅವರು ಪೀಠವನ್ನಲಂಕರಿಸಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಆಗಲೇ ಹೇಳುತ್ತಿದ್ದೆ, ಸಿಬಿಐ. ತನಿಖೆಯ ರೀತಿಯಲ್ಲಿ ಕೆಲವೊಂದು ಪ್ರಶ್ನೆಗಳು ಹುಟ್ಟುತ್ತವೆ ಎಂದು. ಆ ಪ್ರಶ್ನೆಗಳ ಕಾರಣದಿಂದ ಸಿಬಿಐನ. ಕ್ರೆಡಿಬಿಲಿಟಿಗೆ ಧಕ್ಕೆ ಬರುತ್ತದೆಂದು ನಾನು ಹೇಳಿದೆ. ಮೊದಲನೆಯದು, ಒಂದು ದಿವಸ ಸಿಬಿಐ.ನವರ ಹೇಳಿಕೆ ಏನೆಂದು ಹೇಳತಕ್ಕದ್ದು ಅವರ ವಕೀಲರ ಹೇಳಿಕೆ ಮೇಲೆ ಗೊತ್ತಾಗಬೇಕು ಒಂದು ದಿವಸ ಅವರ ವಕೀಲರು ಹೇಳುತ್ತಾರೆ.

"The councel did not understand why Mr. Jalappa should fear arrest after the arrest of Mr. Narayan. If the CBI had approached him in connection with the case, i was only to apprise him of the progress in investigation. At one point the counsel said Mr Jalappa could not be CBI supervisor. Moreover CBI do not propose action against Minister. Thus there was no ground for his suspicion."

ಅದೇ ವಕೀಲರು ಮತ್ತೊಂದು ದಿನ ಹೇಳುತ್ತಾರೆ :

"Mr, Jalappa engineered murder. Jalappa is the architect of the murder."

This is blowing hot and cold.

ಇದು ಸಿಬಿಐ.ನವರ ಅಭಿಪ್ರಾಯವನ್ನು ಪ್ರತಿಬಿಂಬಿಸುವುದಾದರೆ ಇದರ ಅರ್ಥ ಏನು ಎಂದು ಗೊತ್ತಾಗಲಿಲ್ಲ. ಒಂದು ದಿವಸ ಹೇಳುತ್ತಾರೆ. ಜಾಲಪ್ಪನವರ ವಿರುದ್ಧ ಯಾವುದೇ ಕೇಸ್ ಇಲ್ಲ, ಅವರನ್ನು ಅರೆಸ್ಟ್ ಮಾಡಬೇಕಾದ ಅಗತ್ಯ ಇಲ್ಲ, ಸುಮ್ಮಸುಮ್ಮನೆ ಬೇಲ್‌ಗೆ ಅರ್ಜಿ ಹಾಕಿದ್ದಾರೆ ಎಂದು. ಮರುದಿವಸ ಹೇಳುತ್ತಾರೆ Jalappa is the architect of this murder. ಎಂದು ಆಮೇಲೆ ಸಿಬಿಐ.ನವರು ಕೆಲವು ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು. ಮತ್ತು ಅಧಿಕಾರಿಗಳನ್ನು

ಅರೆಸ್ಟ್ ಮಾಡಿದರು. ಅವರಲ್ಲಿ ಪೊಲೀಸ್ ಕಸ್ಟಡಿಯಲ್ಲಿ ಕೆಲವರಿದ್ದರೆ ಮತ್ತೆ ಕೆಲವರು ಜುಡಿಶಿಯಲ್ ಕಸ್ಟಡಿಯಲ್ಲಿದರು. ಅವರು ಮ್ಯಾಜಿಸ್ಟ್ರೇಟ್‌ರ ಮುಂದೆ ಕೊಟ್ಟಂತಹ ಹೇಳಿಕೆಯನ್ನು ನಾನು ಇಲ್ಲಿ ಓದಬೇಕೆಂದಿದ್ದೇನೆ. ಅದರಿಂದ ಬಹುಮಟ್ಟಿಗೆ .....

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗಾದರೆ ಕರ್ನಾಟಕದಲ್ಲಿ ನಡೆಯುತಕ್ಕ ಮರ್ಡರ್ ಕೇಸ್, ಪೊಲೀಸ್ ಇನ್‌ವೆಸ್ಟಿಗೇಷನ್ (ಸಿ.ಐ) ರಿಪೋರ್ಟ್, ಕೋರ್ಟಿನಲ್ಲಿ ಬೇಲ್ ಅಪ್ಲಿಕೇಷನ್ ಹಾಕಿದ್ದು, ವಕೀಲರು ವಾದ ಮಾಡಿದ್ದು ಎಲ್ಲವನ್ನು ತಂದು ಇಲ್ಲಿ ಹೇಳಬಹುದಲ್ಲವೇ ?

(ಗೊಂದಲ)

SRI A. LAKSHIMSAGAR.—Did you not refer to FIR ?

SRI M. VEERAPPA MOILY.—FIR is the public document. I can produce ; anybody can produce it. Is the statement of the advocate public document ?

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆಯ ಆರೋಪಿ......

SRI M. VEERAPPA MOILY.—What is this ?

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆಯ ಆರೋಪಿ ಬಿ. ಕೃಷ್ಣನ್ ಹೇಳುತ್ತಾನೆ. "ನನ್ನನ್ನು ಪ್ರಶ್ನೆ ಮಾಡುವಾಗ ನನಗೆ ಹೊಡೆದಿರುತ್ತಾರೆ. ನನಗೆ ಯೂರಿನ್ ಪಾಸ್ ಮಾಡಲು ತೊಂದರೆಯಾಗಿದೆ ಕಾರಣ ನ್ಯಾಯಾಲಯದಲ್ಲಿ ಹೇಳಿದ ನಂತರ ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿ ಅಂದಾಗ ಬೂಟ್ಸ್ ಕಾಲಿನಲ್ಲಿ ಬಲಗಾಲ ಹಿಮ್ಮಡಿ ಮೇಲೆ ಒದ್ದಿದ್ದಾರೆ. ಎಡಗೈಯ ಮೊಣದ ಮೇಲೆ ಕಾಲಿನಲ್ಲಿ ಒದ್ದಿದ್ದಾರೆ ರಾಜಕೀಯ ವ್ಯಕ್ತಿ ನಿನಗೆ ಯಾರು ಹಣ ಕೊಟಿದ್ದಾರೆ ಹೇಳು ಎಂದು ಕೇಳಿದರು. ನನಗೆ ಗೊತ್ತಿಲ್ಲ ವೆಂದು ಹೇಳಿದೆ. ನನಗೆ ಆಗಾಗ ಹೊಟ್ಟೆನೋವು ಬರುತ್ತಿತ್ತು."

ನಾಲ್ಕನೆಯ ಆರೋಪಿ ನಾರಾಯಣ್ ಹೇಳುತ್ತಾನೆ. "ನಮ್ಮ ಬಟ್ಟೆ ಬಿಚ್ಚಿಸಿ ಹಿಂದುಮುಂದು ಸೇರಿಸಿಕೊಂಡು ಒದ್ದಿದ್ದಾರೆ, ಕಾಲಿನಿಂದ ಒದ್ದಿದ್ದಾರೆ ಮತ್ತು ಕೈಯಿಂದ ಗುದ್ದಿದ್ದಾರೆ. ನನಗೆ ಕಾಲಿನಲ್ಲಿ ಆಪರೇಷನ್ ಆಗಿದೆ. ಡಿಸಿಪಿ. ನಾರಾಯಣಪ್ಪ ಎಂದು ಹೇಳಿ, ಹೋಂ ಮಿನಿಸ್ಟರ್ ಜಾಲಪ್ಪನವರ ಹೆಸರು ಹೇಳಿ, ಅವರನ್ನು ತಂದು ಹಾಕುತ್ತೇವೆ, ನಿಮಗೆ ಎಷ್ಟು ದುಡ್ಡು ಕೊಟ್ಟರು, ನೀವೇ ಕೊಲೆ ಮಾಡಿದ್ದೀರಿ ಎಂದು ಹೇಳಿ ನಮಗೆ ಚಿತ್ರಹಿಂಸೆ ಕೊಟ್ಟಿದ್ದಾರೆ. ನಮಗೆ ಹೆಂಡತಿ ಮಕ್ಕಳನ್ನು ನೋಡಲಿಕ್ಕೆ ಬಿಡಲಿಲ್ಲ."

ಐದನೇ ಆರೋಪಿ ನಂದಕುಮಾರ್, "ಶಂಕರ್ ಪಿ.ಎಸ್.ಐ. ಷೂ ಕಾಲಿನಿಂದ ನನ್ನ ತಲೆ ಮೇಲೆ ಒದ್ದರು. ನನ್ನನ್ನು ಕೂರಿಸಿ ಎರಡು ಕಾಲುಗಳನ್ನು ಮುಂದಕ್ಕೆ ನೀಡಿಸಿದರು. ೫–೬ ಜನರು ಕಸ ತುಳಿದ ಹಾಗೆ ತುಳಿದರು. ಡಾಕ್ಟರಿಗೆ ಅದನ್ನೆಲ್ಲ ತೋರಿಸಿದೆ. ನನ್ನ ಬನಿಯನ್ ತೆಗೆಸಿ ಹತ್ತು ಜನ ಹೊಡೆದರೂ ಸಾಯುವುದಿಲ್ಲವೆಂದು ಹೊಡೆದರು. ನಿಮ್ಮ ಸರ್ಕಾರವನ್ನು ಉರುಳಿಸುತ್ತೇವೆಂದು ಹೇಳಿ, ಯಾರು ನಿಮಗೆ ಆದೇಶ ನೀಡಿದರು ಎಂದು ಸಹ ಕೇಳಿದರು. ನನಗೆ ಏನೂ ಗೊತ್ತಿಲ್ಲ, ಎಲ್ಲಿ ಏನು.....

(ಗೊಂದಲ)

ಅಧ್ಯಕ್ಷರು.—ಅವರು ಹೇಳಲಿ, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಕತ್ತಿನ ಮೇಲೆ ೪–೫ ಜನ ಸರಿಯಾಗಿ ಗುದ್ದಿ ಗುದ್ದಿ......

ಒಬ್ಬ ಮಾನ್ಯ ಸದಸ್ಯರು.—ಮುಖ್ಯ ಮಂತ್ರಿಗಳು ಎಲ್ಲ ತೀರ್ಮಾನ ತೆಗೆದುಕೊಳ್ಳು......

(ಗೊಂದಲ)

ಅಧ್ಯಕ್ಷರು.—ನೀವು ಏನು ಹೇಳಿದರೂ ರೆಕಾರ್ಡ್ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಸೆಂಟ್ರಲ್‌ನವರು, ಸುಪ್ರೀಂ ಪವರ್ ನಮ್ಮಲ್ಲಿದೆ, ನಾವು ಏನು ಬೇಕಾದರೂ ಮಾಡುತ್ತೇವೆಂದು ಹೇಳಿದರು .....

SRI M. VEERAPPA MOILY.—it is tutored by you, your Government.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅವರು ಹೇಳಿ ಮುಗಿಯಲಿ, ನಿಮಗೆ ರಿಪ್ಲೈ ಬೇಡವೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂಥ ಒಂದು ಹೇಳಿಕೆಯನ್ನು ಈರೀತಿ ಇಷ್ಟು ದುರುಪಯೋಗ ಮಾಡುವುದು ಸರಿಯಲ್ಲ.

(ಗೊಂದಲ)

SRI M. VEERAPPA MOILY.—you are playing Janata politics. Home Minister and the Law Minister has been premitted to mis- use this House.

SRI MALLIKARJUN M. KHARGE.—He wants to blame Central Government, Congress (I) and the CBI.

(Interruption)

SRI M. VEERAPPA MOILY —For political reasons, you and your government tutored this.

ಅಧ್ಯಕ್ಷರು.—ನಿಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ಕುಳಿತುಕೊಳ್ಳಿ ಖರ್ಗೆಯವರೇ: ಮೊಯಿಲಿಯವರೇ ?

(ಗೊಂದಲ)

ಅಧ್ಯಕ್ಷರು.— ಯಾರು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಏತಕ್ಕೆ ಹೆದರುತ್ತೀರಿ? ಯಾರು ಏನು ಮಾಡಿದ್ದಾರೆ?

(ಗೊಂದಲ)

SRI M. RAGHUPATHY.—Buta Singh is the author.

(Interruption)

SRI M. VEERAPPA MOILY.—You cannot protect them. Government is abetting the offence.

(Interruption)

SRI M. RAGHUPATHI.—Mr. Buta Singh is the author.

(Interruption)

SRI M. RAGHUPATHI.—The Union Home Minister is the author.

(Interruption)

SRI MALLIKARJUN M. KHARGE.—Why is he defending? Why he is proving that they are innocent? Why he is reading the statement Let the investigation be completed.

(Interruption)

ಅಧ್ಯಕ್ಷರು.—ಅವರು ಏನು ಹೇಳುತ್ತಾರೊ ಹೇಳಲಿ. ಆಮೇಲೆ ನಿಮಗೆ ವಿವರಣೆ ಬೇಕಾಗಿತ್ತು ಅಂದರೆ ನಾನು ಅವಕಾಶ ಕೊಡುತ್ತೇನೆ. ಮೊದಲು ಅವರು ಹೇಳಿ ಮುಗಿಸಲಿ.

(ಗೊಂದಲ)

ಅಧ್ಯಕ್ಷರು.—ಕೇಳಿ ಹೊರಗಡೆ ಏನಾದರೂ ಹೇಳಿದರೆ ಅದನ್ನು ಇಲ್ಲಿ ಹೇಳಬಾರದಿಲ್ಲ ಎಂದು ಹೇಳುತ್ತೀರಿ, ಇಲ್ಲಿ ಹೇಳುವುದಕ್ಕೆ ಹತ್ತಿದರೆ ಅಬ್‌ಸ್ಟ್ರಕ್ಷನ್ ಮಾಡುತ್ತೀರಿ. ಏನು ಇದರ ತತ್ವ ನಿಮ್ಮದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್‌ವೆಸ್ಟಿಗೇಷನ್ ಆಗುತ್ತಿದೆ.

(ಗೊಂದಲ)

ಶ್ರೀ ಎನ್. ಎಂ ಅಡ್ಯಂತಾಯ. - ಅಧ್ಯಕ್ಷರೆ, ಮುಖ್ಯ ಮಂತ್ರಿಗಳು ಕೇರಳಕ್ಕೆ ಏಕೆ ಹೋದರು, ಅಲ್ಲಿ ರಷೀದ್ ಅವರ ಸಂಬಂಧಿಕರನ್ನು ಏಕೆ ಭೇಟಿ ಮಾಡಿದರು........

(ಗೊಂದಲ)

MR. SPEAKER.—It will not be recorded. Whatever you have stated is expunged.

(ಗೊಂದಲ)

SRI B. BASAVALINGAPPA.—Sri Raghupathi has mentioned the name of Buta Singh He cannot defend himself here.

ಅಧ್ಯಕ್ಷರು.—ಅವರು ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು.—ಅವರು ಉತ್ತರ ಹೇಳುವುದಕ್ಕೆ ಹತ್ತಿದ್ದಾರೆ, ಹೇಳಲಿ.

(ಗೊಂದಲ)

ಅಧ್ಯಕ್ಷರು.—ತಾವು ಕೂಡ್ರಿ, ನಾನು ಹೇಳುತ್ತೇನೆ. ಕಾನಡೆಯವರೆ ಕೂಡಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೇಳುತ್ತಾರೆ, ನನಗೆ ಅಸ್ತಮಾ ಮತ್ತು ಹೊಟ್ಟೆ ನೋವು ಇದೆ...... ನನಗೆ ಹೊಡೆದರು, ಹೋಂ ಮಿನಿಸ್ಟರ್ ಜಾಲಪ್ಪ, ಡಿ ಸಿ.ಪಿ. ನಾರಾಯಣ್‌ರವರ ಹೆಸರನ್ನು ಹೇಳು ನಿನಗೆ ಏನೂ ಮಾಡುವುದಿಲ್ಲ ಬಿಟ್ಟುಬಿಡುತ್ತೇವೆ ಎಂದು ಹೇಳಿದರು......

(ಗೊಂದಲ)

ಅಧ್ಯಕ್ಷರು.—ಈಗ ಅವರು ಹೇಳುವುದಕ್ಕೆ ಹೊರಟಿದ್ದಾರೆ, ನಾನು ಅವಕಾಶ ಕೊಟ್ಟಿದ್ದೇನೆ. ದಯವಿಟ್ಟು ತಾವು ಕೊಡಬೇಕು. ಖರ್ಗೆಯವರೆ, ಈಗ ಕುಳಿತುಕೊಳ್ಳುತ್ತೀರೋ ಅವರಿಗೆ ಅಡೆತಡೆ ಮಾಡುತ್ತೀರೋ ಹೇಳಿ. ಯಾರು ಅಡೆತಡೆ ಮಾಡುತ್ತಾರೆ ಅದು ಸರಿಯಲ್ಲ ಅದು ಒಳ್ಳೆಯ ಪದ್ಧತಿ ಅಲ್ಲ. ಶ್ರೀಮತಿ ನಾಗರತ್ನಮ್ಮನವರೇ ತಾವು ಲೀಡರಾಗಿ ನಿಮ್ಮ ಪಾರ್ಟಿಯವರಿಗೆ ಹೇಳಬೇಕು. You must control your own party people.

(ಗೊಂದಲ)

ಅಧ್ಯಕ್ಷರು. — ನಾವು ಅವರಿಗೆ ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ, ಅವರು ಹೇಳುತಾ ಇದ್ದಾರೆ

ಶ್ರೀ ಧರ್ಮಸಿಂಗ್.—ಅವರು ಆಪಾದನೆ ಮಾಡುತ್ತಾ ಇದ್ದಾರೆ.

ಅಧ್ಯಕ್ಷರು.—ಅವರು ಅಪಾದನೆ ಮಾಡಿದರೆ, ಅವರು ಅಕಸ್ಮಾತ್ತಾಗಿ ಏನಾದರೂ ಆಡಬಾರದ್ದು ಅಂದಿದ್ದರೆ ನಾನು ಎಕ್ಸ್‌ಪಂಜ್ ಮಾಡುತ್ತೇನೆ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ರಘುಪತಿಯವರು ಏನು ಹೇಳಿದ್ದಾರೆ ಅದನ್ನು ಕಡತದಿಂದ ತೆಗೆಯಿರಿ.

(ಗೊಂದಲ)

ಅಧ್ಯಕ್ಷರು.—ಖರ್ಗೆಯವರೆ, ತಾವು ಮುಖ್ಯ ಮಂತ್ರಿಗಳು ಹೊರಗಡೆ ಮಾತನಾಡುತ್ತಾರೆ, ಇಲ್ಲಿ ಹೇಳುವುದಿಲ್ಲ ಎಂದು ಹೇಳುತ್ತೀರಿ, ಇಲ್ಲಿ ಹೇಳುವುದಕ್ಕೆ ಹೋದರೆ ಅವರಿಗೆ ಅವಕಾಶ ಕೊಡುವುದಿಲ್ಲ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಕಾಲು ಕೆರದು ಜಗಳ ತೆಗೆಯುವುದಕ್ಕೆ ಬಂದಿದ್ದಾರೆ.

ಅಧ್ಯಕ್ಷರು.—ಕಾಲು ಕೆರೆದು ಜಗಳ ತೆಗೆಯುವುದಕ್ಕೆ ಬಂದಿದ್ದಾರೆಂದು ತಾವು ಮಾತನಾಡುವುದು ಸರಿಯಲ್ಲ. ಈ ರೀತಿ ತಾವು ಹೇಳಿದರೆ ಅವರೂ ಕೂಡ ನೀವು ಕಾಲು ಕೆರೆದು ಜಗಳ ತೆಗೆಯುತ್ತೀರಿ ಎಂದು ಹೇಳುತ್ತಾರೆ. ಆದ್ದರಿಂದ ಇದು ಸರಿಯಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉತ್ತರ ಹೇಳುವುದನ್ನು ಬಿಟ್ಟು ಅಕ್ಯೂಸ್ ನಂಬರ್ ಒಂದರಿಂದ ಹತ್ತರವರೆಗೆ ಓದಿಕೊಂಡು ಹೋಗುತ್ತಿದ್ದಾರೆ.

ಅಧ್ಯಕ್ಷರು.—ಕೋರ್ಟಿನಲ್ಲಿ ಹೇಳಿದ್ದು ಅದು, ,

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಕೋರ್ಟಿನಲ್ಲಿ ಹೇಳಿದ್ದನ್ನು ಹೇಳುತ್ತಿದ್ದೇನೆ, ಅದಕ್ಕೆ ತಾವು ಏಕೆ ಹೆದರಬೇಕು. ಸಿಕ್ಕಾಪಟ್ಟೆ ಆರೋಪ ಮಾಡುವುದು, ಅದನ್ನು ಹೇಳುವುದಕ್ಕೆ ಹೋದರೆ.. —

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಹೆದರುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾವಲ್ಲ, ನೀವು ಹೆದರುತ್ತಾ ಇದ್ದೀರಿ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮದು ಇಡೀ ಪ್ರಪಂಚಕ್ಕೆ ಗೊತ್ತಾಯಿತು.

(ಗೊಂದಲ)

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ತಮಗೆ ಮುಖ್ಯಮಂತ್ರಿಗಳ ಉತ್ತರ ಬೇಡವೋ ಅಥವಾ ಬೇಕೋ ಹೇಗೆ ಹೇಳಿ ? ಮಾನ್ಯ ಅಧ್ಯಕ್ಷರಾಯರವರೇ ತಾವು ಕೂಡ್ರಿ ಈ ತರಹ ನೀವು ಮಾಡಿದರೆ ನಿಮ್ಮನ್ನು ಹೆಸರಿಸಬೇಕಾಗುತ್ತದೆ. ನಿಮ್ಮನ್ನು ಹೊರಗೆ ಕಳುಹಿಸಬೇಕಾಗುತ್ತದೆ

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಬೂಟಾಸಿಂಗ್‌ರವರ ಹೆಸರನ್ನು ಅವರೇ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಸಭೆಯ ಕಾರ್ಯಕಲಾಪಕ್ಕೆ ಅಡೆತಡೆಯುಂಟು ಮಾಡಿದರೆ ಅವರೇ ಇರಲಿ ಇವರೇ ಇರಲಿ, ಎಲ್ಲರನ್ನು ಹೊರಗೆ ಹಾಕಬೇಕಾಗುತ್ತದೆ. ತಾವು ಕೂಡ್ರಿ. ಕಲಾಪಕ್ಕೆ ಅಡೆತಡೆ ಉಂಟು ಮಾಡಿದರೆ ನಾರಾಯಣಕುಮಾರ್ ಅವರೇ ಆಗಲಿ ಬೇರೆ ಯಾರೇ ಇರಲಿ ಹೊರಗೆ ಹಾಕಬೇಕಾಗುತ್ತದೆ. ಶ್ರೀಮತಿ ನಾಗರತ್ನಮ್ಮನವರೇ, ಮುಖ್ಯಮಂತ್ರಿಗಳು ಉತ್ತರ ಕೊಡಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮುಖ್ಯಮಂತ್ರಿಗಳು ಯಾವ್ಯಾವ ಕಡೆಗೊ ಹೋಗಿ ಹೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಾನು ಹೇಳಿದ್ದು ನಿಜ. ಸೆಷನ್ಸ್ ಕೋರ್ಟ್ ಜಡ್ಜ್‌ಮೆಂಟ್ ಅನ್ನು ಸ್ಟ್ರೇಂಜ್ ಎಂದು ಹೇಳಿದ್ದು ನಿಜ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಲೆಹಿಡುಕರೆಂದು ಹೇಳಿದ್ದೀರಿ. ಮುತ್ತಿನಂತಹ ಮಾತು ನಿಮ್ಮ ಬಾಯಿಂದ ಬಂತು

ಶ್ರೀ ರಾಮಕೃಷ್ಣ ಹೆಗಡೆ.—ಹೈಕೋರ್ಟ್ ಜಡ್ಜ್‌ಮೆಂಟ್ ಏನು ಬಂತು ? ಅದನ್ನು ನಾನು ಹೇಳಬೇಡವೆ ?

> "It clearly demonstrates that the Court below has not properly comprehended the pleadings and consequently misdirected itself and committed serious error of illegality in the exercise of its discretionary power."

(Interruption)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತೇನೆ? ಇದೇನಿದು ?

ಅಧ್ಯಕ್ಷರು.—ವಿರೋಧಪಕ್ಷದ ನಾಯಕಿಯರು ಕ್ರಿಯಾಲೋಪ ಎತ್ತಿದ್ದಾರೆ, ಮುಖ್ಯಮಂತ್ರಿ ಅವರೇ, ತಾವು ಸ್ವಲ್ಪ ನಿಲ್ಲಿಸಿ. ಈಗ ತಮ್ಮ ಕ್ರಿಯಾಲೋಪ ಏನು ಹೇಳಿ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ದಯವಿಟ್ಟು ಕ್ಷಮಿಸಬೇಕು, ನಾವಾಗಲೀ ನಮ್ಮ ಕಡೆಯವರಾಗಲೀ ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲವೆಂದು ಹೇಳಿದ್ದೀರಿ. ಆದರೆ ಮಾನ್ಯ ರಘುಪತಿಯವರು ಬೂಟಾಸಿಂಗ್‌ರವರ ವಿಚಾರದಲ್ಲಿ ಹೇಳಿದ್ದು ರೆಕಾರ್ಡ್‌ನಲ್ಲಿವೆ.

ಅಧ್ಯಕ್ಷರು.—ಅವರು ಆಡಬಾರದ ಮಾತನ್ನು ಆಡಿದ್ದರೆ ಅವನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲವೆಂದು ತಾವು ಹೇಳತಕ್ಕದ್ದು ಕೊನೆಯ ಅಸ್ತ್ರ. ರೆಕಾರ್ಡ್‌ಗೆ ಹೋಗುವುದಿಲ್ಲವೆಂದು ತಾವು ಹೇಳಬೇಕಾದರೆ, ತಾವು ದಯಮಾಡಿ ಯಾವ ರೂಲ್ ಪ್ರಕಾರ ಹೇಳುತ್ತೀರಿ ಎನ್ನುವುದನ್ನು ರೂಲ್ ಕೋಟ್ ಮಾಡಿ ಹೇಳಿ. ಆಮೇಲೆ ರೆಕಾರ್ಡ್‌ಗೆ ಹೋಗುವುದಿಲ್ಲವೆಂದು ಹೇಳಿ. ನಾನು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲವೆಂದು ಹೇಳಿದರೆ ಹೇಗೆ ?

ಅಧ್ಯಕ್ಷರು.—ಇಂಟರ್‌ಫಿಯರ್ ದಯವಿಟ್ಟು ಮಾಡಬೇಡಿ. ಅವರು ಉತ್ತರ ಹೇಳುತ್ತಿದ್ದಾರೆ, ಈಗ ತಾವು ಕೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಉತ್ತರ ಎಲ್ಲಿ ಹೇಳುತ್ತಿದ್ದಾರೆ? ಓದುತ್ತಿದ್ದಾರೆ. ಸಿ.ಬಿ.ಐ ಎಂದು ಹೇಳುತ್ತಾರೆ, ಬೂಟಾಸಿಂಗ್‌ರವರ ಹೆಸರು ಹೇಳುತ್ತಾರೆ, ರಘುಪತಿಯವರು ಮಿನಿಸ್ಟರ್ ಆಗಿದ್ದವರು, ಮಿನಿಸ್ಟರ್ ಆಗಿ ಅನುಭವ ಇರುವವರು, ಅವರಿಗೆ ಸ್ವಲ್ಪ ಹೇಳಿ, ಅವರು ಹೇಳಿದ್ದು ರೆಕಾರ್ಡ್‌ಗೆ ಹೋಗಬೇಕೆ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಿಮ್ಮ ಕಡೆಯವರನ್ನು ಕಂಟ್ರೋಲ್ ಮಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೊದಲು ನಿಮ್ಮ ಕಡೆಯವರನ್ನು ಕಂಟ್ರೋಲ್ ಮಾಡುವುದಕ್ಕೆ ಹೇಳಿ.

ಅಧ್ಯಕ್ಷರು.—ಯಾರೂ ಯಾರ ಕಡೆಗೂ ಕೈತೋರಿಸಿ ಮಾತನಾಡುವುದು ಬೇಡ. ಯಾರನ್ನು ಕುರಿತು ಹೇಳುವುದು ಬೇಡ, ಯಾರೂ ಆ ತರಹ ಮಾತನಾಡಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖರ್ಗೆಯವರು ಹೇಳಿದರು, ಏನೋ ಒಂದು ಪದ ಉಪಯೋಗಿಸಿದರೆಂದು ಹೇಳಿದರು. ಸೆಷನ್ಸ್ ಕೋರ್ಟ್ ಜಡ್ಜ್‌ಮೆಂಟ್ ಬಗ್ಗೆ ಹೇಳುತ್ತೇನೆ. ಸೆಷನ್ಸ್ ಕೋರ್ಟ್ ಜಡ್ಜ್‌ಮೆಂಟ್ ವಿಚಾರದಲ್ಲಿ ಒಂದು ಶಬ್ದವನ್ನು ಉಪಯೋಗಿಸಿದ್ದು ನಿಜ. ನಾನು ಹೇಳಿದ್ದು 'It looks strange'. ಎಂದು, ಅದರಲ್ಲಿ ಯಾವುದೇ ರೀತಿಯ ಅಪಹೇಳನಕಾರಕವಾದ ಅಥವಾ ಅವಮಾನಕಾರಕವಾದ ಒಂದು ಶಬ್ದ ಅಲ್ಲ.

(ಗೊಂದಲ)

೧-೩೦ ಪಿ. ಎಂ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಹೈಕೋರ್ಟ್ ಬಗ್ಗೆ ಹೇಳಕೂಡದು, ಸುಪ್ರೀಂ ಕೋರ್ಟ್ ಬಗ್ಗೆ ಹೇಳಕೂಡದು. ಹೈಕೋರ್ಟ್‌ನವರು ಹೇಳುತ್ತಾರೆ......

'It clearly demonstrates that the court below has not properly comprehended the pleadings consequently misdirected itself and committed serious error of illegality in exercise of its discretionary power'... ..

(*Interruption*)

'The findings of the learned Sessions Judge that the filing of application under Section 438 of Criminal Procedure Code itself amounts to tacit declaration of non-cooperative attitude is erroneous assumption......

ಇದಕ್ಕಿಂತ ಹೆಚ್ಚು ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಆ ವಿಚಾರದಲ್ಲಿ ನಾನು ಹೇಳಿದೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಾಕಿಯದ್ದನ್ನು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಜಡ್ಜ್‌ಮೆಂಟ್ ಬಗ್ಗೆ ಹೇಳಿದ್ದೇನೆ. ಬಾಕಿಯದ್ದನ್ನು ನೀವು ಓದಿ. ಮಾನ್ಯ ಅಧ್ಯಕ್ಷರೇ ಇದರಲ್ಲಿ ಎರಡು ಮೂರು......

ಶ್ರೀ ಎನ್. ಎಂ. ಅದ್ಯಂತಾಯ —ಅಧ್ಯಕ್ಷರೇ......

ಅಧ್ಯಕ್ಷರು —ತಾವು ಕೂಡಿರಿ. ಎಷ್ಟು ಸಲ ಹೇಳಬೇಕು ನಿಮಗೆ ? ಶ್ರೀಮತಿ ನಾಗರತ್ನಮ್ಮನವರೇ ಇದಕ್ಕೆ ಏನು ಹೇಳಬೇಕು ? ಇವರು ಹೀಗೆ ಮಾಡಿದರೆ ನಾನು ಏನು ಮಾಡಬೇಕು ಹೇಳಿ ? ಈಗ ನೀವು ಏನೇ ಹೇಳಿದರೂ ರೆಕಾರ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಇನ್ನು ಎರಡು ಪ್ರಶ್ನೆಗಳನ್ನು ಇದಕ್ಕೆ ಸಂಬಂಧಪಟ್ಟಂತೆ ಎತ್ತುತ್ತೇನೆ ಆಗಸ್ಟ್ ೧೮ನೇ ತಾರೀಕಿನ ದಿವಸ ಬೆಳಿಗ್ಗೆ ೭.೫೦ ಗಂಟೆಗೆ ಒಂದು ಟೆಲಿಗ್ರಾಮ್ ಶ್ರೀಮತಿ ಅಮೀನಾ ಬೀಬಿ ಅವರಿಂದ ಎಂದರೆ, ಅವರು ಶ್ರೀ ರಶೀದ್ ಅವರ ತಾಯಿ ಶ್ರೀ ಎಂ. ಚಂದ್ರಶೇಖರ್, ಅವಾಗ ನಮ್ಮ ಜನತಾಪಕ್ಷದ ಅಧ್ಯಕ್ಷರಾಗಿದ್ದರು. ಅವರಿಗೆ ಬೆಂಗಳೂರು ನಗರದಿಂದಲೇ ಅಮೀನಾ ಬೀಬಿ ಹೆಸರಿನಲ್ಲಿ ಒಂದು ಟೆಲಿಗ್ರಾಮ್ ಹೋಗುತ್ತದೆ. M.A. Rasheed, Advocate kidnapped by High Grounds Police found killed. Home Minister Jalappa behind' .. ಈ ಒಂದು ಟೆಲಿಗ್ರಾಮ್ ಅನ್ನು ಬೆಂಗಳೂರಿನಿಂದ ಅಮೀನಾ ಬೀಬಿ ಅವರು ಕೊಡುತ್ತಾರೆ, ೧೮ನೇ ತಾರೀಖಿನ ದಿವಸ ಬೆಳಿಗ್ಗೆ ಆದರೆ ಆ ದಿವಸ ಸಾಯಂಕಾಲ ಐದೂವರೆ ಗಂಟೆಗೆ ಶ್ರೀಮಾನ್ ವೆಂಕಟಪ್ಪ, ಎಂಬ ಹೆಸರಿನ ವಕೀಲರು ಸಿ.ಆರ್.ಪಿ.ಸಿ. ಮಿಸಲೇನಿಯಸ್ ಕ್ಲಾಸ್ ೪೯ರ ಕೆಳಗಡೆ ಎರಡನೇ ಮ್ಯಾಜಿಸ್ಟ್ರೇಟರ ಮುಂದೆ ಸರ್ಚ್‌ವಾರೆಂಟ್ ಅನ್ನು ರಷೀದ್ ಬಗ್ಗೆ ಹೊರಡಿಸಬೇಕು ಮತ್ತು ಅವರನ್ನು ಪ್ರೊಡ್ಯೂಸ್ ಮಾಡಬೇಕೆಂದು ಹೇಳುತ್ತಾರೆ. ಇವೆರಡಕ್ಕೂ ಒಂದಕ್ಕೊಂದು ಸಂಬಂಧ ಇದೆಯಾ ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ. ಇನ್ವೆಸ್ಟಿಗೇಶನ್ ಸ್ಟೇಜ್‌ನಲ್ಲಿದ್ದಾಗಲೇ ಇದೆಲ್ಲ ಹೇಳಿಕೊಂಡು ಹೋದರೆ ನಾಳೆ ಪೇಪರ್‌ನಲ್ಲಿ ಬರುತ್ತದೆ...

ಶ್ರೀ ರಾಮಕೃಷ್ಣ ಹೆಗಡೆ.— ಹಾಗಿದ್ದರೆ ಈ ವಿಚಾರವನ್ನು ಇಲ್ಲಿ ಎತ್ತಲಿಕ್ಕೆ ನೀವು ಸಾವಿರ ಸಲ ಯೋಚನೆ ಮಾಡಬೇಕಾಗಿತ್ತು, ನಾವು ಸತ್ಯವನ್ನು ಹೊರಗಡೆ ಹಾಕಿದರೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಮನೆ ಸುಪ್ರೀಂ ಇರುವಂತಾದ್ದು. ನಾನು ಹೇಳುತ್ತೇನೆ...

(ಗೊಂದಲ)

ಅಧ್ಯಕ್ಷರು.—ನೀವು ಹೇಳುವುದು ನೀವು ಹೇಳಿ, ಅವರು ಹೇಳುವುದನ್ನು ಅವರು ಹೇಳಲಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದೇನು, ಅವರು ಇವರು, ಇವರು ಅವರು ಏನೆಲ್ಲಾ ಹೇಳುತ್ತಿದ್ದಾರೆ. ಇದು ಇನ್ನೂ ಇನ್ವೆಸ್ಟಿಗೇಶನ್ ಹಂತದಲ್ಲಿರುವಾಗ...

ಅಧ್ಯಕ್ಷರು.—ಇನ್ವೆಸ್ಟಿಗೇಶನ್ ಹಂತದಲ್ಲಿದ್ದಾಗ ನೀವು ಈ ವಿಷಯವನ್ನು ಚರ್ಚೆಗೆ ತಂದಿದ್ದು ನಿಮ್ಮ ತಪ್ಪು,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರು ಅಡ್ವೋಕೇಟ್ ತರಹ ಪ್ಲೀಡ್ ಮಾಡಿದರೆ ಹೇಗೆ? It is left to the Court and investigation authority. You cannot defend...

SRI RAMAKRISHNA HEGDE.—Certainly I have to defend my Government...

(*Interruption*)

SRI M. MALLIKARJUNA KHARGE.—You are encouraging indirectly those who are accused. Don't do that. Let them prove ..

ಅಧ್ಯಕ್ಷರು.—ಮಾನ್ಯ ಖಾರ್ಗೆಯುವರೇ, ನೀವು ಮೊದಲು ಏನು ಹೇಳುತ್ತೀರೋ ಹೇಳಿ, ಆಮೇಲೆ ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಜಡ್ಜ್‌ಮೆಂಟ್ ಕೊಡುವುದಕ್ಕೆ ಇವರು ಯಾರು ?......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಕಡೆಯಿಂದ ಲೆಟರ್ ಬರಲಿಲ್ಲ, ಏನು ಕಾರಣ ಎಂದರೆ...

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ತರ ತರದ ವಿಷಯವನ್ನು ಪ್ರಸ್ತಾಪ ಮಾಡಿ ಜನರನ್ನು ಮಿಸ್‌ಲೀಡ್ ಮಾಡುವುದಕ್ಕೆ ಅವರಿಗೆ ಸ್ವಾತಂತ್ರ್ಯ ಇದೆ. ಇದರೆ ಸತ್ಯವನ್ನು ಹೊರಗೆ ಹಾಕುವಂಥ ಸ್ವಾತಂತ್ರ್ಯ ನನಗೆ ಇಲ್ಲವೆ ? ಇದು ನಿಮ್ಮ ನೀತಿ, ಇದು ಕಾಂಗ್ರೆಸ್‌ನ ಸಂಸ್ಕೃತಿ. ೧೮ನೇ ತಾರೀಖಿಗೆ ಬೆಂಗಳೂರಿನಲ್ಲಿ ಅಮೀನಾಬೀಬಿಯವರಿಗೆ ಗೊತ್ತಾದದ್ದು ಹೇಗೆ ? ಅವರು ಹೇಗೆ ಟೆಲಿಗ್ರಾಂ ಕೊಡುತ್ತಾರೆ? ಅದಾದಮೇಲೆ ರಷೀದ್‌ರವರ ಹೆಸರಿನಲ್ಲಿ ಬಾರ್ ಅಸೋಸಿಯೇಷನ್‌ಗೆ ಒಂದು ಲೆಟರ್ ಹೋಗುತ್ತದೆ. ಆದರೆ ಪ್ರತಿಯೊಂದು ಲೆಟರ್‌ನಲ್ಲಿ ರಷೀದ್‌ರವರು ತಾರೀಖು ಹಾಕುತ್ತಾರೆ. ಆದರೆ ಈ ಲೆಟರ್‌ನಲ್ಲಿ ತಾರೀಖು ಇಲ್ಲ, ಇದು ಏತಕ್ಕೆ...

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಸಿ.ಬಿ.ಐ. ನವರು ಅದನ್ನು ನೋಡುತ್ತಾರೆ, ಕೊಮಾ ಹಾಕಿಲ್ಲ, ಫುಲ್‌ಸ್ಟಾಫ್ ಹಾಕಿಲ್ಲ, ಎಂದು ಹೇಳಿದರೆ, ಇದು ಯಾವ ಜನತಾ ಪಾರ್ಟಿ...

(ಗೊಂದಲ)

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ...

ಶ್ರೀ ರಾಮಕೃಷ್ಣ ಹೆಗಡೆ.—ರಷೀದ್‌ರವರು ತಮ್ಮ ಹೆಂಡತಿಗೆ...

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—೧೪ನೇ ತಾರೀಖಿಗೆ ಒಂದು ಪತ್ರವನ್ನು ರಷೀದ್‌ರವರು ಅವರ ಮನೆಯವರಿಗೆ ಬರೆಯುತ್ತಾರೆ. ಅದರಲ್ಲಿ ನಾರಾಯಣ್‌ರವರ ವಿಚಾರದಲ್ಲಾಗಲೀ, ಮಾನ್ಯ ಜಾಲಪ್ಪ ನವರ ವಿಚಾರದಲ್ಲಾಗಲೀ ಸರ್ಕಾರದ ವಿಚಾರದಲ್ಲಾಗಲೀ, ಯಾವುದೇ ಒಂದು ಶಬ್ದ, ಟೀಕೆ ಇಲ್ಲ ಏನಾದರೂ ತೋದರೆ ಆಗಿದ್ದರೆ, ಈಗ ಏನೊಂದು ಕಥೆ ಬಿಲ್ಡ್ ಮಾಡುತ್ತಿದ್ದಾರೆ, ಅದು ನಿಜವಾಗಿದ್ದರೆ, ಈ ಒಂದು

ಪತ್ರದಲ್ಲಿ ಬರೆಯಲೇಬೇಕಾಗಿತ್ತು. ಆದರೆ ಅದಕ್ಕೆ ಬದಲು ಒಂದು ಖುಷಿಯಿಂದ, ಸಂತಸದ ಸುದ್ದಿಯನ್ನು ಬರೆದಿದ್ದಾರೆ. ಅದೇರೀತಿ ೧೫ನೇ ತಾರೀಖಿಗೆ ಮತ್ತೊಂದು ಕಾಗದವನ್ನು ತನ್ನ ಹೆಂಡತಿಗೆ ಕಳುಹಿಸುತ್ತಾರೆ ಇದರಲ್ಲೂ ಇಲ್ಲ. ನಾನು ಹಿಂದೆ ಮುಂದೆ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇಷ್ಟೇ ಸಾಕು. ಕೊನೆಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಏಕೆಂದರೆ ಮಾನ್ಯ ಮೊಯ್ಲಿಯವರು ಮೊನ್ನೆ ಒಂದು ವಿಚಾರ ಹೇಳಿದರು. ಕೇರಳದ ಹೈಕೋರ್ಟ್‌ನ ಜಡ್ಜ್‌ಮೆಂಟ್ ಕೊಟ್ಟಿತು. ಅದರಲ್ಲಿ, excluding Karunakaran...

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಮಿಸ್‌ಲೀಡ್ ಮಾಡಬಾರದಲ್ಲ...

ಅಧ್ಯಕ್ಷರು.— ಮೊಯ್ಲಿಯವರೇ ತಾವು ಆಮೇಲೆ ಕೇಳಿ. ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಏಕೆಂದರೆ ಈ ಜಡ್ಜ್‌ಮೆಂಟ್ ಓದಲಿ, ಏಕೆಂದರೆ ಇದು ನಾನು ಬರೆದ ಜಡ್ಜ್‌ಮೆಂಟ್ ಅಲ್ಲ.

Sri M. VEERAPPA MOILY.—The allegation was...

(*Interruption*)

Sri RAMAKRISHNA HEGDE.—I am quoting the judgment. It was held that the conduct of all those who dealt with and who were responsible in dealing with the successive representations of the petitioner Rajan received by Home Secretary and the Home Minister Karunakaran is callous if not highly suspicious. Taking into account the gravity and the seriousness of the case we would have expected the counteraffidavit of the Home Minister detailing all the steps taken regarding whereabouts of Sri Rajan. We should have expected the affidavit of Sri Karunakaran, the present Chief Minister, also to be more categorical particularly in answering the plea that the petitioner mee him on 10-3-76.

It is unfortunate that the respondents (including Karunakaran) have not viewed the matter with sense of responsibility expected of them, atleast when the attention was drawn to the serious situation.

Since these affidavits have been considered at length, I err on the side of brevity and contain myself by observing that there has been more an attempt of suppressing truth than divulging it.

Subsequently, Karunakaran has admitted about the demise of Rajan in Police custody on 2-3-1976.

The case of truth is served best by plain speaking, that we are afraid, has been a casuality in this case.

In the circumstances indicated, we think that there is a prima-facie case of giving a false evidence as against the 4th respondent (Karunakaran) That calls for enquiry by a Magistrate of First Class having jurisdiction over the area.

We hold action by way of prosecution for perjury will be called for in respect of Karunakaran. that would be in regard to the falsity of statements made by him. Complaints will accordingly be filed before the Court of Chief Judicial Magistrate, Ernakulam, for giving false evidence which is an offence u/s 191 of the IPC''. ಅಲ್ಲಿ ಯಾವ ತರಹದ ಕ್ರೂರಿಯಲ್ ಆಗಿದೆ ಎನ್ನುವ ಬಗ್ಗೆ ಒಂದೇ ಒಂದು ಮಾತನ್ನು ಇಲ್ಲಿ ಹೇಳಬೇಕು. ಇದು ಎಲ್ಲರ ಕಣ್ಣನ್ನು ತೆರೆಸತಕ್ಕಂಥಾದ್ದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ನಿಮ್ಮ ಡಿಫೆನ್ಸ್‌ಗೆ ಕಂಪಾರಿಸನ್ ಮಾಡುತ್ತಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.— ಕಂಪಾರಿಸನ್...

ಶ್ರೀ ಎಂ. ವೀರಪ್ಪ ಮೊಯಿಲಿ.— ಅದರ ಬದಲು ರಾಜೀನಾಮೆ ಕೊಡುವುದಿಲ್ಲ ಎಂದು ಹೇಳಿ ಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.— ಅದಕ್ಕೂ ಬರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಕರ್ನಾಟಕದಲ್ಲಿ ಮೌಲ್ಯ ಮತ್ತೊಂದು ಯಾವುದೂ ಇಲ್ಲವಲ್ಲ. ಏತಕ್ಕೆ ಹೇಳುತ್ತೀರಿ. ರಾಜೀನಾಮೆ ಕೊಡುವುದಿಲ್ಲ ಎಂದು ಹೇಳಿಬಿಡಿ;

ಶ್ರೀ ರಾಮಕೃಷ್ಣ ಹೆಗಡೆ,— ಕರುಣಾಕರನ್ ಮೌಲ್ಯದ ಬಗ್ಗೆ ಹೇಳುತ್ತೀನಿ.

ಶ್ರೀ ಎಂ. ರಘುಪತಿ,— ಅಧ್ಯಕ್ಷರೇ, ಮೌಲ್ಯವೆಲ್ಲಾ ಕೇಂದ್ರದಲ್ಲೇ ಇರುವುದು.

ಅಧ್ಯಕ್ಷರು.— ರಘುಪತಿಯವರೇ ಕುಳಿತುಕೊಳ್ಳಿ, ಮುಖ್ಯಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.— ಇದೇ ಜಡ್ಜ್‌ಮೆಂಟಿನಲ್ಲಿರುವ ಮತ್ತೊಂದು ವಿಚಾರ ಹೇಳುತ್ತೇನೆ.

"Horror houses and torture chambers have figured in films and fiction. We would have assumed they had no contemporary relevance, but the gruesome story unfolded to us in this, the last chapter of this case, speaks of brutal and inhuman torture in a Police camp in the State organised by Senior State Police Officials. The Home Secretary to the Government and the Inspector General of Police of the State have now, in marked contrast in their earlier stand, affirmed before us in no uncertain terms in court that he was in fact taken into police custody as found by us in this case. But Rajan, we are told, is no longer available for production. He is said to have succumbed to "operation torture.''

A great tribute to Congress Government...

ಶ್ರೀ ಎಂ. ವೀರಪ್ಪ ಮೊಯಿಲಿ.— ಯಾರ ಜಡ್ಜ್‌ಮೆಂಟ್ ಇದು.

ಶ್ರೀ ರಾಮಕೃಷ್ಣ ಹೆಗಡೆ.— ಇದೇ ಜಡ್ಜ್‌ಮೆಂಟ್. ಕೊನೆಯದಾಗಿ ಹೇಳುತ್ತೇನೆ. ಮಾನ್ಯ ಮೊಯಿಲಿಯವರು ಪುನಃ ಪುನಃ ನೀವು ರಾಜೀನಾಮೆ ಕೊಡಿ, ನೀವು ರಾಜೀನಾಮೆ ಕೊಡಿ ಎಂದು ಕೇಳುತ್ತಿದ್ದಾರೆ. ಇದೇ ರೀತಿ ಮಾನ್ಯ ಖರ್ಗೆಯವರೂ ಸಹ ಕೇಳುತ್ತಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಗೆಟ್ ಔಟ್ ಎಂದು ಹೇಳಿದರು. ನಾನು ಇಲ್ಲಿ ಅಥವಾ ಈ ಜಾಗದಲ್ಲಿ ಅಥವಾ ಮೂರನೇ ಮಹಡಿಯಲ್ಲಿ ನಾನು ಕುಳಿತುಕೊಳ್ಳತಕ್ಕಂಥ ಜಾಗದಲ್ಲಿ ನಾನು ಅವರ ಕರ್ಟಸಿಯಿಂದ ಕುಳಿತುಕೊಂಡಿಲ್ಲ. ಇಲ್ಲಿ ನಾನು ಅವರ ಪರವಾನಗಿಯಿಂದ ಇಲ್ಲ. ಈ ಜಾಗ ನನಗೆ ಅವರು ಭಿಕ್ಷೆಸಂ

ಕೊಟ್ಟಿದ್ದಲ್ಲ, ಅಥವಾ ನನಗೆ ಉಡುಗೊರೆ ಕೊಟ್ಟಿದ್ದಲ್ಲ. ಆದಕ್ಕಾಗಿ ಗೆಟ್ ಔಟ್ ಎಂದು ಹೇಳತಕ್ಕ ಅಧಿಕಾರ ಅವರಿಗೆ ಇಲ್ಲ. ಆದರೆ ನನ್ನ ವಿಷಾದ ಏನು ಎಂದರೆ ಶ್ರೀಮತಿ ನಾಗರತ್ನಮ್ಮನವರ ಬಾಯಿಂದಲೂ ಇದು ಬಂತಲ್ಲ ಎಂದು ನನಗೆ ವಿಷಾದವಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಲ್ಲ, ನಾನು ನಿಮ್ಮನ್ನು ರಾಜೀನಾಮೆ ಕೊಡಿ ಎಂದು ಕೇಳಲಿಲ್ಲ...

ಶ್ರೀ ರಾಮಕೃಷ್ಣ ಹೆಗಡೆ.—ಹಾಗಾದರೆ ಸರಿ I am sorry I misquoted you. ನೀವು ನಿಮ್ಮ ಸ್ಥಾನದ ಗೌರವವನ್ನು ಉಳಿಸಿಕೊಂಡಿದ್ದೀರಿ, ಅದಕ್ಕಾಗಿ ಅಭಿನಂದನೆಗಳು. ನಾನು ಹೇಳುತ್ತೇನೆ. ನಾನು ರಾಜಿನಾಮೆ ಕೊಡಬೇಕು, ಮಾನ್ಯ ಜಾಲಪ್ಪನವರು ರಾಜಿನಾಮೆ ಕೊಡಬೇಕು. ಆಯಿತು, ಜಾಲಪ್ಪನವರು ರಾಜಿನಾಮೆ ಕೊಟ್ಟು ಆಯಿತು. ಇನ್ನು ನಿಮ್ಮ ಕಣ್ಣು ಎಲ್ಲಿ ಇದೆ. ಅದರ ಉದ್ದೇಶ ಗೊತ್ತುಂಟು, ಅದರ ಮೋಟೀವ್ ಕೂಡ ಗೊತ್ತುಂಟು. ನನ್ನ ರಾಜಿನಾಮೆ ಯಾವಾಗ ಸಿಗುತ್ತದೆ ಎಂದರೆ, ಕರ್ನಾಟಕದ ಜನತೆ ನನ್ನನ್ನು ಸೋಲಿಸಿದಾಗ, ನಮ್ಮ ಪಕ್ಷವನ್ನು ಸೋಲಿಸಿದಾಗ ಮಾತ್ರ ಸಿಗುತ್ತದೆಯೇ ಹೊರತು, ಅಲ್ಲಿಯವರೆಗೆ ಸಿಕ್ಕುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಕೊನೆಯ ವಾಕ್ಯಕ್ಕೆ ಉತ್ತರ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದ ಜನತೆ ಅವರ ಪಕ್ಷವನ್ನು ಸೋಲಿಸಿದಾಗ, ಇವರನ್ನು ಸೋಲಿಸಿದಾಗ ಇವರು ಹೋಗುವುದು ಕಣ್ಣು ತೆರೆದುಕೊಂಡಿರುವವರಿಗೂ, ಮುಚ್ಚಿಕೊಂಡಿರುವವರಿಗೂ, ಎಲ್ಲರಿಗೂ ಗೊತ್ತಾಗುತ್ತದೆ. ನಿಮ್ಮ ಸ್ಥಾನ ನಮಗೆ ಬೇಕಾಗಿಲ್ಲ, ನಿಮ್ಮ ರಾಜಿನಾಮೆ ನಮಗೆ ಬೇಕಾಗಿಲ್ಲ, ನಿಮ್ಮ ಪಕ್ಷದ ವಿಚಾರ ನಮಗೆ ಬೇಕಾಗಿಲ್ಲ. ಇದನ್ನು ಸಾವಿರಸಲ ಹೇಳಿದ್ದೇನೆ, ತಿರುಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ವಿಚಾರದಲ್ಲಿ ಹೇಳಬೇಕಾದರೆ, ನಮ್ಮ ಪಾರ್ಟಿಯಲ್ಲಿ ಯಾರೊಬ್ಬರಿಗೂ ನಿಮ್ಮ ಸ್ಥಾನ ಕಿತ್ತುಕೊಳ್ಳಬೇಕೆಂಬ ಇಚ್ಛೆ ಇಲ್ಲ. ಏತಕ್ಕೆಂದರೆ ಖಜಾನೆಯೆಲ್ಲಾ ಖಾಲಿ, ಮೂರು ಕಾಸೂ ಇಲ್ಲ. ಇಂತಹ ಸನ್ನಿವೇಶದಲ್ಲಿ ನಾವು ಈ ರಾಜ್ಯದಲ್ಲಿ ಕುಳಿತುಕೊಂಡು ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ನಾವು ಕೆಲಸ ಮಾಡುವುದಕ್ಕೆ ಜನ ಒಪ್ಪಿಕೊಂಡಾಗ, ನಾವು ಅಲ್ಲಿಗೆ ಬರುತ್ತೇವೆ. ಏನೆಂದು, ಆ ಲೆಟರ್ ಬರೆದರು, ಈ ಲೆಟರ್ ಬರೆದರು ಎಂದು ಮುಖ್ಯಮಂತ್ರಿಗಳು ಹೇಳಿದರು. ಇದೆಲ್ಲಕ್ಕಿಂತ ಹೆಚ್ಚಾಗಿ ಮಾನ್ಯ ರಘುಪತಿಯವರು, ಮಾನ್ಯ ಬೂಟಾಸಿಂಗ್‌ರವರ ಮೇಲೆ ಅಪವಾದ ಹೊರಿಸಿದರು. ತಾವು ಮಾತನಾಡುತ್ತಾ, ಮಿಶ್ರಾರವರ ವಿಚಾರ ಮಾತನಾಡಿದಿರಿ, ಕೊನೆಗೆ ಕರುಣಾಕರನ್ ವಿಚಾರದಲ್ಲೂ ಹೇಳಿದಿರಿ. ಏನು ಮೋಟೀವ್. ಇದು ಪಾರ್ಲಿಮೆಂಟ್‌ನಲ್ಲಿ ಏಕೆ ಚರ್ಚೆಯಾಯಿತು ? ಇದು ಪೊಲಿಟಿಕಲ್‌ನಿಂದ ದುರುಪಯೋಗ ವಾಗುತ್ತಿದೆ ಎಂದು ಹೇಳಿದಿರಿ. ನಾನು ಹೇಳುತ್ತೇನೆ, ದುರುಪಯೋಗವಾಗುತ್ತಿರುವುದು ನಿಜ. ಏಕೆ ಎಂದರೆ, ಜಾಲಪ್ಪನವರನ್ನು ನೋಡಿರುವವರ ಪೈಕಿ ಪಾಪ ಅವರು ಈ ಕೆಲಸ ಮಾಡಿದ್ದಾರೆಂದು ಹೇಳುವುದಕ್ಕೆ ನಮ್ಮ ಮನಸ್ಸು ಒಪ್ಪಿಕೊಳ್ಳುವುದಿಲ್ಲ. ಅವರೂ ಏನಾದರೂ ಗೌಡಿಕೆ ಮಾ , ಕೊಡ್ರೊ ನಾಲ್ಕೇಟು ನೋಡಿಕೊಳ್ಳೋಣ ಎಂದು ಹೇಳಿರಬಹುದು. ಹಾಗೆ ಹೇಳಿ ಹೊಡೆಸುವುದಕ್ಕೆ ಏನಾದರೂ ಮಾಡಿರಬಹುದು. ಯಾರೂ ಕೊಂದು ಹಾಕಬೇಕೆಂದು ಮಾಡಿದ್ದು ಇಲ್ಲ. ಈ ರೀತಿ ಮಾಡಿರಬಹುದೇ ಹೊರತು, ಮರ್ಡರ್ ಮಾಡಬೇಕೆಂಬ ಮನಸ್ಸು ಇರುವುದಿಲ್ಲ. ಆದರೆ ತಾವು, ಆ ಸ್ಥಾನವನ್ನು ಉಪಯೋಗಿಸಿಕೊಂಡು, ಈ ಲೆಜಿಸ್ಲೇಚರ್ ಉಪಯೋಗಿಸಿಕೊಂಡು, ಅವರನ್ನು ಡಿಫೆಂಡ್ ಮಾಡ ಬೇಕೆಂದು, ಸಿ.ಬಿ.ಐ. ಮೇಲೆ ಗೂಬೆ ಕೂರಿಸಿ, ಆಗುತ್ತಿರತಕ್ಕಂಥ ಏನು ಇನ್‌ವೆಸ್ಟಿಗೇಷನ್ ಇದೆ, ಇದರ ಬಗ್ಗೆ ತಾವೇ ಇದು ಏಕೆ ಆಯಿತು, ಅದು ಏಕೆ ಆಯಿತು, ಅವಳು ಯಾರು, ಹಾಗೆ, ಹೀಗೆ ಎಂದು ಹೇಳಿದ್ದೀರಿ. ಇದು ಸರ್ವಥಾ ಸರಿಯಲ್ಲ. ತಮ್ಮ ಈ ಹೇಳಿಕೆಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಎಷ್ಟೋ ತರದಲ್ಲಿ ಡಿಫೆಂಡ್ ಮಾಡುವುದಕ್ಕೆ ಹೋದಿರಿ. ಇದು ಜನತಾ ಪಕ್ಷದ ನೀತಿ, ಹಾಗೂ ತಮ್ಮ ನೀತಿ ಎಂದು ಹೇಳಿ, ಈ ಉತ್ತರಕ್ಕೆ ನಮಗೆ ಸಮಾಧಾನ ಇಲ್ಲವೆಂದು ಹೇಳಿ ನಾವು ವಾಕೌಟ್ ಮಾಡುತ್ತೇವೆ.

ಶ್ರೀ ಎಂ. ವೀರಪ್ಪಮೋಯಿಲಿ.—ಅಧ್ಯಕ್ಷರೇ ...

(ಗೊಂದಲ)

ಅಧ್ಯಕ್ಷರು.—ವಿರೋಧ ಪಕ್ಷದವರು ವಾಕೌಟ್ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು.

(ಗೊಂದಲ)

(ಮಾನ್ಯ ಸದಸ್ಯರುಗಳು ಈ ಸಮಯದಲ್ಲಿ ಬಹಳ ಜನ ಎದ್ದು ನಿಂತು ಮಾತನಾಡುತ್ತಿದುದ್ದರಿಂದ ಗೊಂದಲಮಯ ವಾತಾವರಣ ಉಂಟಾಗಿತ್ತು.)

ಅಧ್ಯಕ್ಷರು.—ವಾಕೌಟ್ ಮಾಡದೇ ಇದ್ದರೆ ಸಂತೋಷ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೋಗು ಎಂದರೆ ಹೋಗೋದು ಬಾ ಎಂದರೆ ಬರುವುದಕ್ಕಲ್ಲ ನಾವು ಇರುವುದು.

(ಗೊಂದಲ)

ಶ್ರೀ ಎಂ. ರಘುಪತಿ.—ನಾವು ಅವರನ್ನು ಹೊರಗಡೆ ಹೋಗಿ ಎಂದು ಹೇಳಿಲ್ಲ. ಅವರ ಪಕ್ಷದ ನಾಯಕರೇ ವಾಕೌಟ್ ಮಾಡುತ್ತೇವೆದು ಹೇಳಿದಕ್ಕೆ ಅವರ ಪಕ್ಷದವರೇ ಗೌರವ ಕೊಟ್ಟಿಲ್ಲ. ಅಂದರೆ, ಅವರ ನಾಯಕರ ಬಗ್ಗೆ ಅವರಿಗೇ ಗೌರವ ಇಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ,

ಶ್ರೀ ಎಂ. ವೀರಪ್ಪಮೊಯಿಲಿ.—ನಾವು ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಪಕ್ಷದ ನಾಯಕರ ಬಗ್ಗೆ ನಮಗೆ ಗೌರವ ಇದೆ, ನಮ್ಮಲ್ಲಿ ಒಗ್ಗಟ್ಟು ಇಲ್ಲವೆಂದು ತಿಳಿದುಕೊಂಡರೆ ಅದು ನಿಮ್ಮ ಭ್ರಮೆಯಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮಲ್ಲಿ ಹತ್ತು ಹುಳುಕುಗಳು ಇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಉತ್ತರ ಕೊಟ್ಟಿದ್ದಾರೆ. ಅವರ ಉತ್ತರವು ಇನ್‌ವೆಸ್ಟಿಗೇಷನ್ ಮೇಲೆ ಗಂಭೀರವಾದ ಪರಿಣಾಮವಾಗುತ್ತದೆ. ಅವರು ಏನು ಹೇಳಬೇಕೆಂದು ಇದ್ದರೋ ಅದನ್ನೇ ಹೇಳಿದ್ದಾರೆ ಆಕ್ಯೂಸ್ಡ್ ಪರವಾಗಿ ಸ್ಟೇಟ್‌ಮೆಂಟ್ ಓದತಕ್ಕ ಕೆಲಸವನ್ನು ಅವರು ಮಾಡಿದರು. ಇನ್ನೊಂದು ಕಡೆ......

SRI A. LAKSHMI SAGAR.—I would like to know as to what is the ambit of his clarification ?

(Interruption)

ಅಧ್ಯಕ್ಷರು.—ನೀವು ನೇರವಾಗಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಅದನ್ನೇ ಕೇಳುತ್ತಿರುವುದು. ಮಾನ್ಯ ಲಕ್ಷ್ಮೀ ಸಾಗರ್‌ರವರು ಏನು ಕೇಳಬೇಕು ಎಂದು ಹೇಳುತ್ತಾರೋ ಅದನ್ನೇ ಕೇಳುತ್ತೇನೆ. ಇಲ್ಲದಿದ್ದರೆ, ನಾನು ಏನು ಹೇಳಬೇಕೆಂದು ಅವರೇ ಹೇಳಲಿ.

(Interruption)

SRI A. LAKSHMISAGAR.—There is no rule to seek clarification in a matter like this

(Interruption)

ಅಧ್ಯಕ್ಷರು.—ಅವರ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಸತ್ಯಾಂಶ ಇದೆ. ಅವರು ಉತ್ತರ ಕೊಟ್ಟಿದ್ದಾರೆ. ನೀವು ನೇರವಾಗಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಏನು ಕೇಳಬೇಕೆಂದು ಹೇಳುತ್ತಾರೋ ಅದನ್ನೇ ಕೇಳುತ್ತೇನೆ. ಏನು ಕೇಳಲಿ ? (ಶ್ರೀ ಲಕ್ಷ್ಮೀಸಾಗರ್‌ರವರ ಕಡೆ ನೋಡಿಕೊಂಡು ಕೇಳಿದರು.)

ಅಧ್ಯಕ್ಷರು.—ಆಯಿತು. ಕ್ಲಾರಿಫಿಕೇಷನ್ ಕೇಳಿ.

SRI A. LAKSHMISAGAR.—He cannot seek clarifications. There is no provision.

(Interruption)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಖ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ಸಿ.ಬಿ.ಐ.ನವರು ಪಿಂಪ್‌ಗಳನ್ನು ಮತ್ತು ತಲೆಹಿಡುಕರನ್ನು ಕರೆಸಿ ಸ್ಟೇಟ್‌ಮೆಂಟ್ ಕೊಡಿಸಿದ್ದಾರೆಂದು ೧೦ ಸಲ ಹೇಳಿದರು. ಇದು ಸರಿಯೇ ಎಂದು ನಾವು ಪಾಯಿಂಟ್ ರೈಸ್ ಮಾಡಿದ್ದೆವು. ಆದರೆ, ಅದಕ್ಕೆ ಉತ್ತರ ಬರಲಿಲ್ಲ. ಆಮೇಲೆ he stated about ulterior motive. ಸಿ.ಬಿ.ಐ.ನವರ ತಲೆ ಮೇಲೆ ಗೂಬೆ ಕೂರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ತಮ್ಮ ಸ್ಟೇಟ್‌ಮೆಂಟ್‌ನಲ್ಲೇ ಇದೆ. ಅದನ್ನು ಓದಿ ಹೇಳಲಾ ? I am quoting from his Press Statement :

"The Congress-I Central leaders were using the murder of Rasheed to embarrass the Janata Government."

In another Newspaper, he states, "Hegde said that for over six months, C.B.I. had kept quiet and suddenly over-enthusiaatic Advocate of C.B.I., dragged the name of his former cabinet collesgue Mr. R.L. Jalappa with ulterior motives " ತಾವು ಈ ರೀತಿಯಾಗಿ ಹೇಳಿದ್ದೀರಿ. ಒಂದು ಕಡೆ ಇಂಪಾರ್ಷಿಯಲ್ ಎನ್‌ಕ್ವೈಯರಿ ಆಗಲಿ ಎಂದು ಹೇಳಿಕೆ ಕೊಡುತ್ತೀರಿ. ಇನ್ನೊಂದು ಕಡೆ ಅವರ ಮೇಲೆ ಗೂಬೆ ಕೂರಿಸುವ ಅಲಿಗೇಷನ್ ಮಾಡುತ್ತೀರಿ. ಇದರ ಜೊತೆಗೆ ಸೆಂಟ್ರಲ್ ಗೌರ್ನಮೆಂಟ್‌ನ್ನು ಅಬ್ಯೂಸ್ ಮಾಡಿದ್ದೀರಿ. ನಮ್ಮ ಕಾಂಗ್ರೆಸ್ ಪಕ್ಷದವರೇನಾದರು ನಿಮ್ಮ ಹತ್ತಿರ ಬಂದು ಏನಾದರು ಹೇಳಿದ್ದಾರಾ ? ಇದರಲ್ಲಿ ನಿಮಗೇ ಸಸ್ಪಿಶಿಯಸ್ ಇದೆ. "ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ" ಎನ್ನುವ ಹಾಗೆ ನಿಮಗೆ ಆಗಿದೆ. ನಿಮ್ಮ ವರ್ತನೆಯಿಂದಲೇ ಇದು ಗೊತ್ತಾಗುತ್ತದೆ. ಆಮೇಲೆ, ಇನ್ನೊಂದು ಕಡೆ...

ಅಧ್ಯಕ್ಷರು.—ನೇರವಾಗಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅವರು ಇದರ ಬಗ್ಗೆ ಮಾತನಾಡುವುದಕ್ಕೆ ಎರಡು ತಾಸ್ ಅವಕಾಶ ಕೊಟ್ಟಿದ್ದೀರಿ. ನಮಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಆಮೇಲೆ, ನಿಮ್ಮ ರೆಸಿಗ್‌ನೇಷನ್‌ನ್ನು ಕೇಳಿದ್ದು ನಿಜ ಏಕೆಂದರೆ, ಮಾರಲ್ ರೆಸ್ಪಾನ್ಸಿಬಿಲಿಟಿ ಇರಬೇಕು. ಅಕ್ಯೂಸ್ಡ್‌ನ್ನು ನೀವು ಡಿಫೆಂಡ್ ಮಾಡತಕ್ಕಂತಾದ್ದನ್ನು ನೋಡಿದರೆ, ನಿಮಗೆ ಅವರ ಬಗ್ಗೆ ಕಾಳಜಿ ಇದೆ ಎನಿಸುತ್ತಿದೆ. ಆದ್ದರಿಂದ ಕ್ವಿಟ್ ಎಂದು ಗೆಟ್ ಔಟ್ ಎಂದು ನಿಮಗೆ ಹೇಳುವುದು ಸರಿ. ಈಗಲೂ ಹೇಳುತ್ತೇನೆ. ನಿಜವಾಗಿಯೂ ಮೌಲ್ಯಾಧಾರಿತ ರಾಜಕಾರಣದ ಮಾತು ಆಡುತ್ತಿದ್ದ ನೀವು ಯಾವಾಗಲೂ ರೆಸಿಗ್ನೇಷನ್ ಲೆಟರ್ ಜೇಬಿನಲ್ಲಿದೆ ಎಂದು ಹೇಳುವ ನೀವು ಈಗ ಅದನ್ನು ಈಚೆಗೆ ತೆಗೆದು ಕೊಟ್ಟುಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೆಯದಾಗಿ ಒಂದು ಸ್ಪಷ್ಟನೆ ಮಾಡಲಿಕ್ಕೆ ನಾನು ಬಯಸುತ್ತೇನೆ. ನಾನು ಅಲ್ಟೀರಿಯರ್ ಇಂಟೆನ್‌ಷನ್ ಇದೆ ಎಂದು ಸಿಬಿಐ ವಿರುದ್ಧ ಹೇಳಿಲ್ಲ. ಯಾರು ವಕೀಲರು ಇದ್ದಾರೊ, ಅವರಿಗೆ ಹೈಕೋರ್ಟ್ ಜಡ್ಜ್ ಆಗಬೇಕೆಂದು ಇದೆ. ಆದ್ದರಿಂದ ಹಾಗೆ ಅವರ ಕುರಿತು ಹೇಳಿದ್ದೇನೆ ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಅನುಕೂಲವಾಗೋ ಹಾಗೆ ಜಡ್ಜ್‌ಮೆಂಟ್ ಕೊಟ್ಟರೆ ಅವರಿಗೆ ನೀವು ಅನುಕೂಲ ಮಾಡಿಕೊಡುತ್ತೀರೋ ಹಾಗಾದರೆ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳಿದ್ದು ವಕೀಲರ ವಿಚಾರದಲ್ಲಿ. ಎರಡನೆಯದು, ಮೊದಲಿನಿಂದಲೂ ಸಿಬಿಐ ಜೊತೆಗೆ ನಮ್ಮ ಸರ್ಕಾರ ನಮ್ಮ ಪೋಲಿಸ್ ಖಾತೆ ನೂರಕ್ಕೆ ನೂರರಷ್ಟು ಸಹಕಾರವನ್ನು ಕೊಟ್ಟುಕೊಂಡು ಬಂದಿದೆ. ಸಿಬಿಐನವರು ಇವತ್ತಿನವರೆಗೂ ರಾಜ್ಯಸರ್ಕಾರದ ಸಹಕಾರ ಸಿಕ್ಕಿಲ್ಲ ಎಂದು ಹೇಳಿಲ್ಲ. ಮುಂದೂ ಸಹಕಾರ ಕೊಡುತ್ತೇವೆ. ಮೂರನೆಯದಾಗಿ ಮೇಲಿದ್ದಂಥವರು, ಅವರ ಪಕ್ಷದವರು ಇದರ ಹಿಂದಿದ್ದಾರೆ ಎನ್ನುವುದು. ನಾಲ್ಕನೆಯದೇನೆಂದರೆ ಒಬ್ಬರು ಹೇಳುತ್ತಾರೆ.

The Government is dead. ಮತ್ತೊಬ್ಬರು The Chief Minister should resign. If the Government is dead, where is the Chief Minister ? ಆಗ ನಿಮ್ಮ Ceremony ಆಗುತ್ತದೆ. ಜನರ ಹತ್ತಿರ ಹೋಗೋಣ ನಿಮ್ಮಲ್ಲಿ ಎಷ್ಟು ಜನ ಮತ್ತೆ ಇಲ್ಲಿಗೆ ಬರುತ್ತೀರೋ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅಡ್ವೊಕೇಟ್ಸ್, ಹೈಕೋರ್ಟ್ ಜಡ್ಜ್‌ಗಳ ಕುರಿತು ಇವರು ಹೇಳಿದ್ದಾರೆ, ಅದನ್ನು ಕಡತದಿಂದ ತೆಗೆಸಿಹಾಕಬೇಕು, ಏಕೆಂದರೆ ಅವರು ಇಲ್ಲಿ ಇಲ್ಲ.

ಅಧ್ಯಕ್ಷರು.—ನಿಮಗೆ ಕ್ಲಾರಿಫಿಕೇಷನ್ ಕೇಳಿ ಎಂದು ಹೇಳಿರುವುದು. ಇಲ್ಲದಿದ್ದರೆ ನಾನು ಮುಂದಕ್ಕೆ ಹೋಗಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.–ಬಾಟ್ಲಿಂಗ್ ಕೇಸಿನಲ್ಲಿ ಇವರಿಗೆ ವಿರುದ್ಧವಾದ ತೀರ್ಪು ಬಂತು. ಆದ್ದರಿಂದ ಇವರು ಹೀಗೆ ಹೇಳುತ್ತಿದ್ದಾರೆ ಎನ್ನಬೇಕಾಗುತ್ತದೆ ಹಾಗಾದರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಯವರು ಈ ವಿಚಾರವನ್ನು ನಾವು ಎತ್ತಿದ ಬಗ್ಗೆ ಪ್ರಶ್ನೆ ಹಾಕಿದ್ದಾರೆ. ಅವರು ಸಿಬಿಐಗೆ ತನಿಖೆಗೆಂದು ಈ ಪ್ರಕರಣವನ್ನು ಒಪ್ಪಿಸಿದ್ದನ್ನು ನಾವು ಸ್ವಾಗತ ಮಾಡಿದ್ದೇವೆ. ಅವರ ಮೇಲೆ ಅಥವಾ ಬೇರೆಯವರ ಮೇಲೆ ನಾವು ಅಪಾದನೆ ಕೊಟ್ಟಿಲ್ಲ. We have stopped the issue. We have never raised any debate on that. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಮತ್ತು ಅವರಿಗೆ ಅರ್ಥ ಮಾಡಿಸಬೇಕು ಯಾರನ್ನೇ ಆಗಲಿ ಅಕ್ಯೂಸ್ಡ್ ಮಾಡಬೇಕೆಂದು ನಾವು ಇಲ್ಲಿಗೆ ಬಂದಿಲ್ಲ. ಅಂಥಾ ಪಾಪದ ಕೆಲಸವನ್ನು ಮಾಡಲು ನಾವ್ಯಾರೂ ಸಿದ್ಧರಿಲ್ಲ. ಇವರು ಒಪ್ಪಿಗೆ ಕೊಟ್ಟ ಮೇಲೆ ಈ ಕೇಸ್ ಅನ್ನು ಸಿ.ಬಿ.ಐ ನವರು ತೆಗೆದುಕೊಂಡರು. ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ರೆಕಾರ್ಡ್ ತೆಗೆದು ನೋಡಬೇಕು ನಾವು ಎಲ್ಲೂ ಕೂಡ ಕೋರ್ಟಿನಲ್ಲಿ ನಡೆಯಂತಕ್ಕಂತಹ ಪ್ರಶ್ನೆಗಳ ಬಗ್ಗೆ ಅಥವಾ ಯಾವುದೇ ಸ್ಟೇಟ್‌ಮೆಂಟ್‌ಗಳ ಬಗ್ಗೆ ಇಲ್ಲಿ ಯಾವುದೇ ಉಚ್ಚಾರವನ್ನು ಮಾಡಲಿಲ್ಲ. ಏಕೆಂದರೆ ಇದು ಸಿ ಬಿ.ಐ. ತನಿಖೆಯಲ್ಲಿದೆ. ಸಿಬಿಐ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಎತ್ತಿದಂತಹ ಕೆಲವು ವಿಚಾರಗಳ ಬಗ್ಗೆ ನಾವು ಆಕ್ಷೇಪಣೆ ಎತ್ತಿದ್ದು ನಿಜ. ಅದಕ್ಕಾಗಿ ಈ ಸದನದ ಉಪಯೋಗವನ್ನು ಮಾಡಿದ್ದೇವೆ. Mens-rea ಬಗ್ಗೆ ಹೇಳಿದರು, ಅದು ನಮಗೂ ಗೊತ್ತಿದೆ, ಮತ್ತೊಬ್ಬರಿಗೂ ಗೊತ್ತಿದೆ. ಅದನ್ನು ನಾನು ಹೇಳಲಿಕ್ಕೆ ಹೋಗಲಿಲ್ಲ. ಸಾಕಷ್ಟು ರೆಕಾರ್ಡ್ ನಮ್ಮಲ್ಲಿತ್ತು ಪತ್ರಿಕಾ ಹೇಳಿಕೆಯಿತ್ತು. ತಾವು ರೆಕಾರ್ಡ್ ತರಿಸಿ ನೋಡಬೇಕು. ಮಾನ್ಯ ಜಾಲಪ್ಪನವರು ಅಕ್ಯೂಸ್ಡ್ ಎಂದು ನಾವು ಬೆರಳು ತೋರಿಸಿಲ್ಲ. If we do that we will be making the prosecutors job. ನಾವು ಮಾತನಾಡುತ್ತಿರುವಾಗ ಮಾನ್ಯ ಜೀವರಾಜ್ ಆಳ್ವರವರು ತಟ್ಟನೆ ಎದ್ದು ನಿಂತು ಜಾಲಪ್ಪನವರನ್ನು ಅಕ್ಯೂಸ್ಡ್ ಎಂದು ಹೇಳಿದರು, ಅವರು ಹೇಳಿದ ಮೇಲೆ ನಾನು ಅಲ್ಲ ಎಂದು ಹೇಳಿದ್ದೇನೆ. I have not done it I have stated what C B. I. counsel as stated that he has engineered the murder. ಇದು ಪತ್ರಿಕೆಯಲ್ಲಿ ಬಂದಿದೆ. ದಯವಿಟ್ಟು ತಾವು ರೆಕಾರ್ಡ್ ತರಿಸಿ ನೋಡಿ. ಮಾನ್ಯ ಜಾಲಪ್ಪನವರನ್ನು ಅಕ್ಯೂಸ್ಡ್ ಎಂದು ತೀರ್ಮಾನ ಮಾಡುವುದು ನಮ್ಮ ಕೆಲಸವಲ್ಲ. It is for the C. B. I. to do it. ಆ ರೀತಿಯ ಆಪಾದನೆ ಮಾಡಲಿಕ್ಕೆ ನಾವು ತಯಾರಿಲ್ಲ. I am telling you. ಮೆನ್ಸ್‌ರಿಯಾ ಇಲ್ಲ ಅಥವಾ ಇದೆಯೆಂದು ನಾವು ವಾದ ಮಾಡಿಲ್ಲ. ಬೇಕಿದ್ದರೆ ತಾವು ಕಪ್ಪು ಕೋಟು ಹಾಕಿಕೊಂಡು ವಾದ ಮಾಡಬಹುದು ಇಲ್ಲವೇ ಇದಕ್ಕೆ ಸಂಬಂಧಪಟ್ಟಂತಹ ವಕೀಲರು ಯಾರಿದ್ದಾರೆ ಅವರಿಗೆ ಈ ರೀತಿಯಾಗಿ ಮಾಡಿ ಎಂದು ಹೇಳಬಹುದಿತ್ತು. ಆ ರೀತಿಯಾಗಿ

ಮಾಡಿ ಈ ಸದನವನ್ನು ದುರುಪಯೋಗ ಮಾಡಲಿಕ್ಕೆ ಹೋಗತಕ್ಕಂತಹ ರಾಜಕೀಯ ತಂತ್ರ ಕುತಂತ್ರ ನಿಮಗೇ ಇರಲೀ ನಮಗೆ ಬೇಡ. ಜನತಾ ಪಕ್ಷಕ್ಕೆ ಮತ್ತು ತಮಗೇ ಇರಲೀ ಬಾಕಿಯವರ ಮೇಲೆ ಗೂಬೆ ಕೂರಿಸುವುದು ಅಥವಾ ಆ ರೀತಿಯ ಅಪಾದನೆ ನಮಗೆ ಬೇಕಾಗಿಲ್ಲ.

ಅಧ್ಯಕ್ಷರು.--ಚಾರ್ಜ್ ಮಾಡುವುದು ಬೇಡ, ನೇರವಾಗಿ ಕ್ಲಾರಿಫಿಕೇಷನ್ ಕೇಳಿ. ಇಲ್ಲದಿದ್ದರೆ ನಾನು ಕಾಲಿಂಗ್ ಅಟೆನ್‌ಷನ್ ಅನ್ನು ತೆಗೆದುಕೊಳ್ಳುತ್ತೇನೆ.

2-00 p. m.

SRI M VEERAPPA MOILY.--I am only asking clarifications. Hon'ble Chief Ministis's lacking in basic knowledge about criminal law. ಮಾನ್ಯ ಮುಖ್ಯ ಮಂತ್ರಿಗಳು ಸಿ.ಬಿ.ಐ. ಬಗ್ಗೆ ಕೆಲವು ಮಾತುಗಳನ್ನು ಹೇಳಿದರು. ಅವರ ಆರ್ಗ್ಯುಮೆಂಟ್ ಹೇಗಿದೆ ಎಂದರೆ ಕೇಂದ್ರದವರು ಇದನ್ನು ಮಾಡಿಸಿದರು ಎಂದು ಹೇಳಿದರು ಇದು ಮಾನ್ಯ ಮುಖ್ಯ ಮಂತ್ರಿಯವರಿಗೆ ಸಲ್ಲತಕ್ಕಂತಹ ಮಾತು ಅಲ್ಲ. ಅವರು ಈ ರೀತಿ ಹೇಳಬಾರದಿತ್ತು. ಸ್ಟೈಲ್ ಆಫ್ ಸೆಷನ್ ಜಡ್ಜ್ ಅದು ಸ್ಟ್ರೇಂಜ್ ಎಂದು ಹೇಳಿದರು ನಾವು ಅದನ್ನು ಕ್ವೆಶ್ಚನ್ ಮಾಡು ವುದಿಲ್ಲ. ನಿಜವಾಗಿ ಸೋಮವಾರ ಮತ್ತು ಗುರುವಾರ ವೆಕೇಷನ್ ಜಡ್ಜ್ ಸಿಟ್ಟಿಂಗ್ ಇರುವಂಥಾದ್ದು ಆರ್ಡಿನರಿ ಸಿಟಿಸನ್ಸ್ ಕೇಸ್ ಬಂದರೆ ಷೆಡ್ಯೂಲ್ಡ್ ಡೇಟ್ ಬಿಟ್ಟು ಮಧ್ಯದಲ್ಲಿ ಹೈಕೋರ್ಟ್ ಜಡ್ಜ್ ಯಾರಾದರೂ ಕುಳಿತುಕೊಳ್ಳುತ್ತಾರೆಯೇ ? I am putting this question to the public. ಜಾಲಪ್ಪನವರು ಮಂತ್ರಿಗಳಾಗಿರಬಹುದು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿಧಾನ ಸೌಧದಲ್ಲಿ ಹೇಳಿದ್ದರು ಎಂದು ಇರಬಹುದು.

ಅಧ್ಯಕ್ಷರು.—ತಾವು ನೇರವಾಗಿ ಕ್ಲಾರಿಫಿಕೇಷನ್ ಕೇಳಿ.

SRI M. VEERAPPA MOILY.—I am not going to call this judgement as state. The judge sat on Tuesday, Wednesday though he is not expected to sit as a vacation judge. In all fairness, you have to with draw it, ಕೋರ್ಟ್ judge ಮೇಲೆ ಅಪಲೇಟ್ ಕೋರ್ಟ್, ಜಡ್ಜ್‌ಮೆಂಟ್ ಪಾಸ್ ಮಾಡುತ್ತಾರೆ. But you are not the appellate court. you cannot put the clock of here appellate authuority. ಹೈಕೋರ್ಟ್, ಸುಪ್ರೀಂ ಕೋರ್ಟ್ ಮಾತ್ರ ತಮಗೆ ನಂಬಿಕೆ ಎಂದು ಹೇಳಿದರೆ ಹೇಗೆ ? Do you mean to say that you have decefved all the courts. These remarks of the Chief Minister, should be expunged or he must withdraw it.

ಅಧ್ಯಕ್ಷರು.—Judgement portion ಬಗ್ಗೆ ಅವರು ಹೇಳಿದ್ದುದು ಜಡ್ಜ್ ಬಗ್ಗೆ ಹೇಳಿಲ್ಲ. ತಾವು ಕ್ಲಾರಿಫಿಕೇಷನ್ ಕೇಳಿ, ಇಲ್ಲದಿದ್ದರೆ ಇದನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಮಾನ್ಯ ರಷೀದ್ ರವರು ಏನೋ ಒಂದು ಅರ್ಜಿಯನ್ನು ೧೪ನೇ ತಾರೀಖು ಕೊಟ್ಟರು ಅದಕ್ಕೆ ಡೇಟ್ ಹಾಕಿರಲಿಲ್ಲ ಎಂದು.

ತಾವು ದಯಮಾಡಿ ಪೋಲೀಸ್ ಕಮಿಷನರಿಂದ ಅದನ್ನು ಈಗಲೇ ತರಿಸಿ, ೧೪ನೇ ತಾರೀಖು ಸ್ವತಃ ಅರ್ಜಿ ಕೊಟ್ಟಿದ್ದಾರೆ. President of the Bar Association has forwarded the petition of Rashid on the same day to the police Commissioner on 14th itself. ಇದು ನಿಮ್ಮ ರಿಕಾರ್ಡ್‌ನಲ್ಲಿದೆಯೇ ? ಡೇಟ್ ಬೇಕಾಗಿಲ್ಲ. It is signed on the same day. President of the Bar Association. ಸಿ.ಓ.ಡಿ.ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. why do you mislead ? ದಯಮಾಡಿ ಪೋಲೀಸ್ ಕಮಿಷನರಿಂದ ವರದಿಯನ್ನು ತರಿಸಬೇಕು, President of the Bar Association had forwarded that petition on 14th itself stating that it was presented by rashid on the very same day in person. ಈಗ ಅದನ್ನು ಹೇಳಿದಿರಲ್ಲಾ, ಇದು ಹೇಳಿ ? if there is any contradictory statement please come out with that. ಸಿ.ಓ.ಡಿ

ಯಾವರು ಸ್ಟೇಟ್‌ಮೆಂಟನ್ನು ಪ್ರೆಸಿಡೆಂಟ್ ಆಫ್ ಬಾರ್ ಅಸೋಸಿಯೇಷನ್ ಅವರಿಂದಲೂ ತೆಗೆದು ಕೊಂಡಿದ್ದಾರೆ, ಇನ್ನು ಅಧ್ಯಕ್ಷರೇ, ರಾಜನ್ ಕೇಸ್ ಬಗ್ಗೆ ಜಡ್ಜ್‌ಮೆಂಟ್ ಕೋಟ್ ಮಾಡಿದರು. ಜಡ್ಜ್‌ಮೆಂಟನ್ನು ಕೋಟ್ ಮಾಡಿದಾಗ ಹೇಬಿಯಸ್ ಕಾರ್ಪಸ್ ೧೯೭೮ರಲ್ಲಿ ಏನು ಲಾ ಜರ್ನಲ್‌ನಲ್ಲಿ ರಿಪೋರ್ಟ್ ಆಗಿದೆ, ಇದರಲ್ಲಿ ಏನು ಹೇಳಿದ್ದಾರೆಂದರೆ "the writ must issue against those persons who are in a position to give effective compliance to the writ" ಇಲ್ಲಿ ಕರುಣಾಕರನ್ ಜವಾಬ್ದಾರಿ ಅಲ್ಲದಿದ್ದರೂ ಕೂಡಾ ತಾವು ಸರ್ಕಾರದ ಅತ್ಯಂತ ಮೇಲಧಿಕಾರಿಗಳಿಗೆ ಈ ರಿಟ್ ಇಸ್ಸ್ಯೂ ಮಾಡಿದರೆ ಅದು ಅರ್ಥವಾಗುತ್ತದೆ, ಹೆಚ್ಚು ಪರಿಣಾಮಕಾರಿಯಾಗುತ್ತದೆ. ಅಲ್ಲಿ ಹೇಬಿಯಸ್ ರಿಟ್‌ನ್ನು ಕೊಟ್ಟರೆ ಹೊರತು ಬೇರೆ ವಿಚಾರ ಏನೂ ಇಲ್ಲ. ಮುಖ್ಯ ಮಂತ್ರಿಯವರು ಫೋರ್ಜರಿ ವಿಚಾರವನ್ನು ಹೇಳಿದರು. That order has been quashed. and Mr. Karunakaran was not an accussed. That is why I said that it is false. ಮಾನ್ಯ ಮುಖ್ಯಮಂತ್ರಿಗಳು ಆ ರೀತಿ ಹೇಳಿಕೆಯನ್ನು ಕೊಟ್ಟಿದ್ದಾರೆ, ಅದು ಸರ್ವಥಾ ಸರಿಯಲ್ಲ. all the accused in the rajan case have been acquitted. ಅವರು ಏನು ಅಬ್‌ಸರ್ವೇಷನ್ ಮಾಡಿದರು ಎಂದು ಹೇಳಿದರೆ "with no more"...

SRI ABDUL NAZIR SAB.—All

SRI M. VEERAPPA MOILY.—It means, all lower level officers, IGP DIG, S. P. They have all been acqiutted.

MR. SPEAKER.—Ask clarifications.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಮುಖ್ಯಮಂತ್ರಿಯವರು ಬಹಳ ಪ್ರಾಮುಖ್ಯವಾದ ವಿಚಾರ ಹೇಳಿದರು. ಮೊನ್ನೆ ನಾನು ಕೇಳಿದ್ದೆ, ದಯಮಾಡಿ ಉತ್ತರ ಕೊಡಬೇಕು ಎಂದು. ಇಷ್ಟೆಲ್ಲಾ ಆರ್ಗ್ಯುಮೆಂಟ್ ಮಾಡಿದರು, ಸನ್ಮಾನ್ಯ ಮುಖ್ಯಮಂತ್ರಿಯವರೇ ವಕೀಲರಾಗಿ ಮಾಡಿದ್ದಾರೆ. It is a case of defence council converting himself into a judge. ಇದು ಬಹಳ ಒಳ್ಳೆಯದು ಇದೆ. ಈ ತರಹ ಜೂರಿಸ್‌ಪ್ರುಡೆನ್ಸ್ ಆದರೆ ದೇಶಕ್ಕೆ ದೇವರೇ ಗತಿ ಎಫ್.ಐ.ಆರ್. ನಲ್ಲಿ ಹೆಸರು ಸೇರಿಲ್ಲ.

ಅಧ್ಯಕ್ಷರು.—ನೀವು ಉದ್ದಕ್ಕೂ ಭಾಷಣ ಮಾಡುತ್ತೀರಿ.

ಶ್ರೀ ಎಂ. ವೀರಪ್ಪಮೊಯಿಲಿ.—ಲಾಸ್ಟ್ ಪಾಯಿಂಟ್. ೧೬ನೇ ತಾರೀಖು ರಷೀದ್ ಕಂಪ್ಲೇಟ್ ಕೊಟ್ಟಿದ್ದಾರೆ, ದಯಮಾಡಿ ಅದನ್ನು ಓದಿ. ಅದರಲ್ಲಿ ಯಾರ ಹೆಸರು ಇದೆ. ತಮಗೆ ಗೊತ್ತಿದೆ. ೧೭೩ (೮) ಪ್ರಕಾರ even after changed next is fitted before the court, further report additional accused, ಕೋರ್ಟಿಗೆ ಹಾಕಬಹುದು. during the trial if a witness say that such and such a man is involved in murder even underthose circumstance an eleventh man could be called as an accused and he can be included as an accused. ಹೀಗಿರುವಾಗ, ಬೇಸಿಕ್ ಕ್ರಿಮಿನಲ್ ಲಾ ಅನ್ನು ಕೂಡಾ ಇವತ್ತು ಮುಖ್ಯಮಂತ್ರಿಯವರು ಮರೆತು ಬಿಟ್ಟಿರಬಹುದು, ಮರೆತು ಬಿಟ್ಟಿದ್ದರೆ you must have a brief from the Law Department. ಅದೇನೂ ಇಲ್ಲದೆ. ಇದು ಸರಿಯಲ್ಲ, ಅದು ಸರಿಯಲ್ಲ ಎಂದು ಹೇಳುವುದು ಸರಿಯಲ್ಲ. ಏತಕ್ಕೆಂದರೆ ಮಾನ್ಯ ಮುಖ್ಯಮಂತ್ರಿಗಳು ತ್ರಿವೇಂಡ್ರಂ, ಕೊಚ್ಚಿನ್ ಕೇಸ್‌ಗಳ ಬಗ್ಗೆ ಹೇಳಿದರು. I am very sorry that our chief minister who has been an advocate displays the innocence, or ignorance of law.

ಅಧ್ಯಕ್ಷರು.—ಅವರೂ ಜಾಣರಿದ್ದಾರೆ, ನೀವು ಜಾಣರಿದ್ದೀರಿ, ಇನ್ನು ಸಾಕು ಮುಕ್ತಾಯ ಮಾಡಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾ, ಮೊಯಿಲಿಯವರು ನನ್ನ ರಾಜೀನಾಮೆ ಕೇಳಿದರು ಎಂದು ಹೇಳಿದರು. ತಾವು ರಾಜೀನಾಮೆ ಕೊಡ ಬೇಡಿ. ** ತಾವು ರಾಜೀನಾಮೆ ಕೊಡಬೇಡಿ. ನೈತಿಕವಾದ ಮೌಲ್ಯತವಾಗೆ ಇದ್ದರೆ ರಾಜೀನಾಮೆ ಕೊಡಿ

(ಗೊಂದಲ)

ಅಧ್ಯಕ್ಷರು.— ಇಂತಹ ಶಬ್ದ ತಾವು ಉಪಯೋಗ ಮಾಡಬಾರದು. ಇದು ಸರಿಯಲ್ಲ. ಆ ಪದ ಅನ್‌ಪಾರ್ಲಿಮೆಂಟರಿ ಇರಬಹುದು, ಇಲ್ಲದಿರಬಹುದು ಇಂತಹ ಶಬ್ದ ಉಪಯೋಗ ಮಾಡತಕ್ಕಂಥಾದ್ದು ಸರಿಯಲ್ಲ. I have exposed it

ಶ್ರೀ ಎಂ. ವೀರಪ್ಪ ಮೊಯಿಲಿ.— ನಾನು ಇದನ್ನು ಅವರಿಗೆ ಹೇಳಲಿಲ್ಲ.

ಅಧ್ಯಕ್ಷರು,— ತಾವು ಗೌರವಯುತವಾಗಿ ನಡೆದುಕೊಳ್ಳಬೇಕು. ನಿಮ್ಮ ಬಗ್ಗೆ ಅವರಿಗೂ ಗೌರವ ಇರಬೇಕು, ಅವರ ಬಗ್ಗೆ ನಿಮಗೂ ಗೌರವ ಇರಬೇಕು.

ಶ್ರೀ ರಾಮಕೃಷ್ಣ ಹೆಗಡೆ.— ಭಂಡರಿಂದ ಇದಕ್ಕಿಂತ ಉತ್ತಮವಾದ ವಾಕ್ಯ ಎಲ್ಲಿ ಬರಬೇಕು ?

ಅಧ್ಯಕ್ಷರು,— ಆಯಿತು, ಇದಕ್ಕೆ ಏನು ಉತ್ತರ ಹೇಳುತ್ತೀರಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.— ಇದಕ್ಕೆ ಉತ್ತರ ಹೇಳುವುದಿಲ್ಲ. ಇದಕ್ಕೆ ಕ್ಲಾರಿಫಿಕೇಷನ್ ಕೊಡು ವುದಿಲ್ಲ. ಅವರು ಮಾಡಿದಂಥ ಭಾಷಣಕ್ಕೆ ನಾನು ಪುನಃ ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಂತಹ ಶಕ್ತಿ ನಿಮ್ಮ ಹತ್ತಿರ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕಂಪ್ಲೇಂಟ್ ಓದಿರಿ.

ಅಧ್ಯಕ್ಷರು.— ಈ ವಿಚಾರ ಇಲ್ಲಿಗೆ ಮುಕ್ತಾಯವಾಯಿತು. ಈಗ ಗಮನ ಸೆಳೆಯುವ ಸೂಚನೆ ಗಳು ಶ್ರೀ ಎಸ್. ಬಂಗಾರಪ್ಪ, ಬಿ. ಸ್ವಾಮಿರಾವ್, ಬಿ. ಲಕ್ಕಪ್ಪ, ಶ್ರೀ ಎಂ. ವೀರಪ್ಪ ಮೊಯಿಲಿ ಮತ್ತು ಶ್ರೀಮತಿ ಸುಮಾ ವಸಂತ್ ಅವರುಗಳು ಗಮನ ಸೆಳೆಯಬಹುದು,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಇದಕ್ಕೆ ಇನ್ನೂ ಉತ್ತರ ಕೊಟ್ಟಿಲ್ಲ. ಕಂಪ್ಲೇಂಟ್ ಓದಿ ಎಂದು ಹೇಳಿದರೆ ಓದುತ್ತಿಲ್ಲ.

ಅಧ್ಯಕ್ಷರು.— ಈಗ ಇದು ಮುಕ್ತಾಯವಾಗಿದೆ. ನಾನು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡಿದ್ದೇನೆ. ನಾನು ಸದಸ್ಯರ ಹೆಸರನ್ನು ಕರೆದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸಿ.ಬಿ.ಐ. ಎನ್‌ಕ್ವೈರಿ ಮೇಲೆ ಇಂಪ್ರೆಷನ್ ಹಾಕತಕ್ಕದ್ದು, ಇನ್‌ವೆಸ್ಟಿಗೇಷನ್ ಕೆಡಿಸತಕ್ಕದ್ದನ್ನು ಮಾಡುತ್ತಿದ್ದಾರೆ, ಕೇಂದ್ರ ಸರಕಾರವನ್ನು ದೂರತಕ್ಕಂಥ ಕೆಲಸ ಮಾಡುತ್ತಿದ್ದಾರೆ ಆಮೇಲೆ ರಶೀದ್ ಅವರು ಕೊಟ್ಟಂಥ ಕಂಪ್ಲೇಂಟ್ ಓದಿ ಎಂದರೆ ಓದುತ್ತಿಲ್ಲ, ಅವರು ಸರಿಯಾದ ಉತ್ತರ ಕೊಡಲಿಲ್ಲ. ಇದನ್ನು ನಾವು ಪ್ರತಿಭಟಿಸಿ ವಾಕ್‌ಔಟ್ ಮಾಡುತ್ತಿದ್ದೇವೆ.

(ಕಾಂಗ್ರೆಸ್ (ಐ) ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.— ನಿಮ್ಮದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಇದೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಅವರು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತಿದ್ದಾರೆ. ಅವರಿಗೆ ಒಂದು ನಿಮಿಷ ಇದು ಮರೆತು ಹೋಗಿತ್ತು, ನೀವು ಅಜೆಂಡಾದಲ್ಲಿ ಮುಂದಿನ ಐಟಮ್ ತೆಗೆದುಕೊಂಡ ಮೇಲೆ ಅವರಿಗೆ ಇದ್ದಕ್ಕಿದ್ದ ಹಾಗೆ ನೆನಪಾಯಿತು, ಅವರ ಲೀಡರ್ ಅವರು ಮೊದಲೇ ವಾಕ್ ಔಟ್ ಮಾಡುತ್ತೇವೆಂದು ಹೇಳಿ ಸೂಚನೆ ಕೊಟ್ಟಿದ್ದರು. ಆಗ ಇವರು ತಮ್ಮ ಮತಿಪ್ರೇರಣೆಯಿಂದ ಅದಕ್ಕೆ ಮನ್ನಣೆ ಕೊಡಲಿಲ್ಲ ಆದರೆ ಒಂದು ಮಾತನ್ನು ಇಲ್ಲಿ ನಾನು ಖಂಡಿಸಲಿಕ್ಕೆ ಬಯಸುತ್ತೇನೆ, ಈ ಸರಕಾರ ಸಿ.ಬಿ.ಐ.ಗೆ ವಿರುದ್ಧ ಇದೆ, ಸಿ ಬಿ.ಐ. ಜೊತೆಗೆ ಸಹಕಾರ ಮಾಡುವುದಿಲ್ಲ

** ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ವೆಂಬ ಮಾತನ್ನು ಏನು ಹೇಳಿದ್ದಾರೆ, ಅದು ಸಂಪೂರ್ಣವಾಗಿ ಸುಳ್ಳು ಎಂದು ನಾನು ಹೇಳುತ್ತೇನೆ. ಇದರಲ್ಲಿ ಪ್ರತ್ಯಕ್ಷವಾಗಿ ಕಾಂಗ್ರೆಸ್ ಪಕ್ಷದ ರೋಲ್ ಇದೆ. ಇದರ ಬಗ್ಗೆ ಯಾವುದೇ ಸಂದೇಹ ನನ್ನ ಮನಸ್ಸಿನಲ್ಲಿ ಇಲ್ಲ.

(ಕಾಂಗ್ರೆಸ್ (ಐ) ಸದಸ್ಯರುಗಳು ಸಭೆಗೆ ಆಗಮಿಸತೊಡಗಿದರು)

ಗಮನ ಸೆಳೆಯುವ ಸೂಚನೆಗಳು

ಹತ್ತು ಎಕರೆಗೆ ಮೀರದಂತೆ ಜಮೀನು ಹೊಂದಿರುವ ಗೇಣಿದಾರರಿಗೆ ಗೇಣಿ ಕಂತಿನ ವಿನಾಯಿತಿ ದೊರೆತಿದ್ದರೂ ಸಹ ಗೇಣಿ ಕಂತನ್ನು ವಸೂಲು ಮಾಡಲು ಕಿರುಕುಳ ಕೊಡುತ್ತಿರುವುದು

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಅಧ್ಯಕ್ಷರೇ, ಹತ್ತು ಎಕರೆಗೆ ಮೀರದಂತೆ ಜಮೀನು ಹೊಂದಿರುವ ಗೇಣಿದಾರರಿಂದ ಗೇಣಿ ಕಂತಿಗೆ ವಿನಾಯಿತಿ ದೊರೆತಿದ್ದರೂ ಸಹ ಗೇಣಿದಾರರಿಂದ ಗೇಣಿ ಕಂತನ್ನು ವಸೂಲು ಮಾಡಲು ಕಿರುಕುಳ ಕೊಡುತ್ತಿರುವ ಬಗ್ಗೆ ಮಾನ್ಯ ಕಂದಾಯ, ಯೋಜನಾ ಹಾಗೂ ನೀರಾವರಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಸಚಿವರು).— ಮಾನ್ಯ ಅಧ್ಯಕ್ಷರೇ ಶ್ರೀಯುತರುಗಳಾದ ಎಸ್. ಬಂಗಾರಪ್ಪ, ಬಿ. ಸ್ವಾಮಿರಾವ್, ಬಿ. ಲಕ್ಕಪ್ಪ, ಎಂ. ವೀರಪ್ಪ ಮೊಯಿಲಿ ಮತ್ತು ಶ್ರೀಮತಿ ಸುಮಾ ವಸಂತ್, ಇವರುಗಳು ತಂದಿರುವ ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಅಡಿಯಲ್ಲಿ ಮಾಜಿ ಗೇಣಿದಾರರಿಗೆ ಅಧಿಭೋಗದಾರತ್ವ (ಒಡೆತನ) ನೀಡಲಾದ ಪ್ರಕರಣಗಳಲ್ಲಿ ಅದರಲ್ಲೂ ಕಡಿಮೆ ವಿಸ್ತೀರ್ಣವುಳ್ಳ ಜಮೀನನ್ನು ಹೊಂದಿರುವಂತಹ ಮಾಜಿ ಗೇಣಿದಾರರು ಸರ್ಕಾರಕ್ಕೆ ಕೊಡಬೇಕಾದ ಪ್ರೀಮಿಯಂ ಹಣದ ಬಾಕಿಯನ್ನು ಪೂರ್ಣವಾಗಿ ಮನ್ನಾ ಮಾಡಬೇಕೆಂಬ ಬೇಡಿಕೆಯು ರಾಜಕೀಯ ಮುಖಂಡರುಗಳು ಹಾಗೂ ಸಾರ್ವಜನಿಕ ಮುಂದಾಳುಗಳಿಂದ ಈ ಹಿಂದೆ ಬಂದಿದ್ದು ಈ ವಿಷಯದ ಬಗ್ಗೆ ರಾಜ್ಯ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳ ಎರಡೂ ಸದನಗಳಲ್ಲಿಯೂ ಸ್ಥೂಲವಾಗಿ ಚರ್ಚಿಸಲಾಗಿತ್ತು. ಈ ಬೇಡಿಕೆಯನ್ನು ಗಮನಿಸಿದ ಸರ್ಕಾರವು ಈ ಸಲಹೆಯನ್ನು ಪರಿಶೀಲಿಸುತ್ತಾ ಈ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವವರೆಗೆ ಹಾಗೂ ಈ ಬಗ್ಗೆ ಕಾಯಿದೆಯ ತಿದ್ದುಪಡಿ ಆಗುವವರೆಗೆ ಈ ಪ್ರೀಮಿಯಂ ಬಾಕಿ ಹಣವನ್ನು ಮಾಜಿ ಗೇಣಿದಾರರಿಂದ ವಸೂಲ್ಮಾಡಬಾರದೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸುತ್ತೋಲೆ ಸಂಖ್ಯೆ. ಆರ್‌ಡಿ ೧೭೭ ಎಲ್‌ಆರ್‌ಎಂ ೮೪ ದಿನಾಂಕ ೧೭-೧೧-೮೪ರಲ್ಲಿ ಸೂಚನೆ ನೀಡಲಾಗಿತ್ತು. ನಂತರ ಈ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು ಭೂಮಿಯ ಒಡೆತನ ಪಡೆದ ಮಾಜಿ ಗೇಣಿದಾರರಲ್ಲಿ ಆರ್ಥಿಕವಾಗಿ ದುರ್ಬಲವಾಗಿದ್ದು ಅಂದರೆ ೧೦ ಎಕರೆ 'ಡಿ' ದರ್ಜೆಯ ಹಾಗೂ ಅದಕ್ಕೆ ಸಮಾನವಾದ ಇತರೆ ದರ್ಜೆಯ ಭೂಮಿ ಅಥವಾ ಅದಕ್ಕಿಂತ ಕಮ್ಮಿ ವಿಸ್ತೀರ್ಣದ ಭೂಮಿಯ ಒಡೆತನವನ್ನು ಪಡೆದ ಮಾಜಿ ಗೇಣಿದಾರರು ಮಾತ್ರ ಅವರು ಸರ್ಕಾರಕ್ಕೆ ದಿನಾಂಕ ೧೭-೧೧-೮೪ರ ರಿಂದಾಚೆಗೆ ಕೊಡಬೇಕಾದ (ಪಾವತಿ ಮಾಡಬೇಕಾದ) ಪ್ರೀಮಿಯಂ ಹಣದ ಕಂತುಗಳನ್ನು ಮಾತ್ರ ಮನ್ನಾ ಮಾಡಲು ತೀರ್ಮಾನ ತೆಗೆದುಕೊಂಡು ಅಂತೆಯೇ ಕರ್ನಾಟಕ ಭೂ ಸುಧಾರಣಾ ಕಾಯಿದೆಯ ಕಲಂ ೫೯ಕ್ಕೆ ಒಂದು ತಿದ್ದುಪಡಿಯನ್ನು ಮಾಡಲಾಯಿತು. ಈ ತಿದ್ದುಪಡಿಯನ್ನು ದಿನಾಂಕ ೬-೧೨-೮೪ಕ್ಕೆ ತರಲಾಯಿತು. ಈ ತಿದ್ದುಪಡಿ ಕಾಯಿದೆಯ ಪ್ರಕಾರ ೧೦ ಎಕರೆ 'ಡಿ' ದರ್ಜೆಯ ಭೂಮಿ ಹಾಗು ಅದಕ್ಕೆ ತತ್ಸಮಾನವಾದ ಇತರೆ ದರ್ಜೆಯ ಭೂಮಿಯನ್ನು ಹೊಂದಿರತಕ್ಕ ಮಾಜಿ ಗೇಣಿದಾರರು ಸರ್ಕಾರಕ್ಕೆ ೧೭-೧೧-೮೪ರ ಆಚೆಗೆ ನೀಡಬೇಕಾದ ಕಂತಿನ ಬಾಕಿಯನ್ನಷ್ಟೇ ಮನ್ನಾ ಮಾಡಲಾಗಿದ್ದು ಈ ಹಣವನ್ನು ಅಧಿಕಾರಿಗಳು ವಸೂಲಿ ಮಾಡುವಂತಿಲ್ಲ.